# 13

# ಸೈತಾನನ ಜೊತೆಗೆ ಮಾಡಬೇಕಾದ ಮತ್ತು ಮಾಡಬಾರದ ವ್ಯವಹಾರಗಳು

# (4:15-31)

ಹೀಗಿದ್ದಾಗ, ಸೈತಾನನು ನಮ್ಮನ್ನು ನಾಶಮಾಡಲು ಪ್ರಯತ್ನಿಸಿದಾಗ ನಾವು ಏನು ಮಾಡಬೇಕು ಎಂಬುದಕ್ಕೆ ನಮ್ಮಲ್ಲಿ ನಾಲ್ಕು ಸಲಹೆಗಳಿವೆ. (1) ಆಶ್ಚರ್ಯಗೊಳ್ಳದಿರಿ, (2)ನಿಮ್ಮ ಕೈಗಳನ್ನು ಅಸಹಾಯಕತೆಯಿಂದ ಚೆಲ್ಲದಿರಿ, (3) ಸೈತಾನನ ನಿಯಮಗಳೊಂದಿಗೆ ಆಡಬೇಡ, (4) ನಿನ್ನ ಬಗೆಗೆ ಮರೆತುಬಿಡು. ಸಭೆಯ ಮೊದಲ ಹಿಂಸೆಯ ಬಗೆಗಿನ ಅಧ್ಯಯನವನ್ನು ನಾವು ಸಂಪೂರ್ಣಗೊಳಿಸುತ್ತಿದ್ದಂತೆ, ನಮ್ಮ ಅಭ್ಯಾಸದಿಂದ ಇನ್ನೂ ಹೆಚ್ಚಿನ ಐದು ಸಲಹೆಗಳನ್ನು ಹೆಕ್ಕಿ ತೆಗೆದುಕೊಳ್ಳಬಯಸುತ್ತೇನೆ.

## ಸೈತಾನನು ಯೋಗ್ಯ ರೀತಿಯಿಂದ ಆಟ ಆಡುವುದನ್ನು ನೀವು ನಿರೀಕ್ಷಿಸದಿರಿ (4:15-17)

ಪೇತ್ರನ ಸಮರ್ಥನಾ ಮಾತುಗಳನ್ನು ಕೇಳಿದ ನಂತರ ನ್ಯಾಯಮಂಡಳಿಯು ಮಾತಿಲ್ಲದಂತಾಯಿತು ಮತ್ತು ಗರಬಡಿದಂತಾಯಿತು. ಒಂದಾಗಿ ಒಂದೆಡೆ ಒಟ್ಟಾಗಿ ಸೇರಿ ಬರುವ ಸಲಹೆ ಮಾಡಿದಾಗ ಮುಜಗುರದ ಮೌನವು ಒಡೆದುಹೋಯಿತು. "ಆ ಮೇಲೆ ಸಭೆಯಿಂದ[1] ಸ್ವಲ್ಪ ಹೊರಗೆ ಹೋಗಿರೆಂದು ಅವರಿಗೆ ಅಪ್ಪಣೆಕೊಟ್ಟು ..." (ವಚನ 15)[2] ಅವರು ತಮ್ಮಲ್ಲೇ ಸಮಾಲೋಚಿಸತೊಡಗಿದರು.

ಅವರು ಸಮಾಲೋಚಿಸಬೇಕಾದ ವಿಷಯವೆನೆಂದರೆ ಮೆಸ್ಸೀಯನನ್ನು ಕ್ರೂಜಿಸಿದ ಭಯಂಕರ ಪಾಪವನ್ನು ಹೇಗೆ ಸುಳ್ಳುಮಾಡಬೇಕು ಎಂಬುದೇ ಆಗಿತ್ತು. ಪೇತ್ರನ ಮೊದಲ ಕೇಳುಗರು ಕೇಳಿದಂತೆ "ನಾವೇನು ಮಾಡಬೇಕು?" (ವಚನ 2:37) ಎಂದು ಅವರು ಕೇಳಬೇಕಿತ್ತು. ಹೇಗೋ, ಅವರಲ್ಲಿ ವೈಯಕ್ತಿಕ ಸ್ವಾರ್ಥವು ಅಡಗಿತ್ತು. ಒಂದು ವೇಳೆ ಅವರು ಯೇಸುವನ್ನು ಮೆಸ್ಸೀಯನು ಎಂದು ಅಂಗೀಕರಿಸಿದ್ದಾದರೆ, ಅಲ್ಲಿ ಕೂಡಲೇ ಮತ್ತೊಬ್ಬ ಮಹಾಯಾಜಕನೂ ಮತ್ತು ಸಭೆಯು ನಿರ್ಮಾಣವಾಗುತ್ತಿತ್ತು. - ಮೊದಲಿದ್ದವರು ಕೆಲಸವಿಲ್ಲದವರಾಗುತ್ತಿದ್ದರು, ಅಧಿಕಾರವಿಲ್ಲದವರಾಗುತ್ತಿದ್ದರು! ಹೀಗಾಗಿ ಅವರ ಗರ್ವ, ತಪ್ಪುತಿಳುವಳಿಕೆ ಮತ್ತು ಪ್ರಾಯೋಗಿ ಕತ್ವದ ಅಡೆತಡೆಗಳಿಂದ ಅವರಿಗೆ ಹೊರಬರಲಾಗಲಿಲ್ಲ. ತಮ್ಮ ಭಯಂಕರವಾದ ತಪ್ಪನ್ನು ಹೇಗೆ ತಿದ್ದಿಕೊಳ್ಳಬೇಕು ಎಂದು ಕೇಳದೇ "ಈ ಮನುಷ್ಯರಿಗೇನು ಮಾಡೋಣ?" ಎಂದು ಕೇಳಿ ದರು (ವಚನ.16ಎ).

ಮುಚ್ಚಿದ ಬಾಗಿಲ ಹಿಂದೆ ಅವರು ಮುಚ್ಚುಮರೆಯಿಲ್ಲದವರಾಗಿರಬಹುದು: ಪ್ರಸಿದ್ಧವಾದ ಸೂಚಕ ಕಾರ್ಯವು ಇವರ (ಪೇತ್ರ ಯೋಹಾನ) ಮೂಲಕ ನಡೆಯಿತೆಂಬುದು ಯೆರೂಸಲೇ ಮಿನಲ್ಲಿ ವಾಸಮಾಡುವವರಿಗೆಲ್ಲರಿಗೂ ಗೊತ್ತಾಗಿದೆಯಷ್ಟೇ. *ಅದು ಆಗಲಿಲ್ಲವೆನ್ನಲಿಕ್ಕಾಗದು* (16ಬಿ; ಒತ್ತಿ ಹೇಳಿದ್ದು ನನ್ನದು). ಈ ದಿನಗಳಂತೆ ನಡೆಯುವ ಅನೇಕ ಅದ್ಭುತಗಳಿಗಿಂತ, ಹೊಸ ಒಡಂಬಡಿಕೆಯ ಅದ್ಭುತಗಳು ನಂಬಲಾರದವರಿಗೂ ಕೂಡಾ ತಕ್ಷಣ ಆಗುವಂತವುಗಳು - ಸಂಪೂರ್ಣವಾದವು ಮತ್ತು ಮನವರಿಕೆಯಾಗುವವು![3]

ಆ ಮಂಡಲಿಯಲ್ಲಿರುವವರಿಗೆ ಆ ಮನುಷ್ಯನು ವಾಸಿಯಾಗಿದ್ದಾನೆ ಎಂದು *ತಿಳಿದಿತ್ತು*; ಆದ್ದರಿಂದ, ಅವರು ಪೇತ್ರ ಯೋಹಾನರ ಸಾಕ್ಷಿಯು ನಿಜ ಎಂದು ತಿಳಿದಿದ್ದರು; ಆದ್ದರಿಂದ

ಯೇಸು ಸತ್ತವರೊಳಗಿಂದ ಎದ್ದು ಬಂದಿದ್ದಾನೆ ಎಂದೂ ತಿಳಿದಿದ್ದರು. ಇನ್ನೂ ಒಂದೇ ಪ್ರಶ್ನೆ ಎಂದರೆ "ಈ ಮನುಷ್ಯರಿಗೆ ನಾವೇನು ಮಾಡೋಣ?" ಎಂಬುದೇ ಆಗಿತ್ತು. ಮತ್ತು ಕ್ರೈಸ್ತತ್ವವು ಹರಡದಂತೆ ಹೇಗೆ ತಡೆಹಿಡಿಯಬೇಕು ಎಂಬುದೊಂದೆ ಅವರ ಚಿಂತೆಯಾಗಿತ್ತು (ವಚನ 17ಅ). ಇಲ್ಲಿ ಕಪಟಾಚರಣೆಯು ವ್ಯಕ್ತಿಯಂತೆ ನಿರೂಪಿತವಾಯಿತು! "ಅವರು ಒಬ್ಬರ ಮುಖದಲ್ಲಿ ಇನ್ನೊಬ್ಬರು ನೋಡುವದು ಹೇಗೆ ಸಾಧ್ಯವಾಯಿತೆಂಬುದು ನೈತಿಕ ಗೊಂದಲ ವಾಗಿತ್ತು. ಬಹುಶಃ ಅವರು ಹಾಗೆ ಮಾಡಲಿಲ್ಲ."[4]

ಗಮನಿಸಿ, "ಯೋಗ್ಯವೆನಿಸಿಕೊಂಡ" ಅದ್ಭುತವೂ ಕೂಡಾ ಕಠಿಣಮಯವಾದ ಹೃದಯಗಳನ್ನು ಬದಲಾಯಿಸಲಾರದು. ಈ ದಿನ, ಕೆಲವರು ಹೇಳುವುದೇನಂದರೆ ಒಂದು ವೇಳೆ ನಾವು ಈ ಪಾಪಮಯ ರೋಗದ ಜಗತ್ತನ್ನು ವಾಸಿಮಾಡಬೇಕೆಂದರೆ ನಮಗೆ ಹೆಚ್ಚಿನ ಅದ್ಭುತಗಳನ್ನು ಮಾಡುವುದು ಅವಶ್ಯವಿದೆ ಎಂದು. "ಅದ್ಭುತಗಳು" ಎಂದಿಗೂ, "ರಕ್ಷಣೆಗಾಗಿ ದೇವರ ಶಕ್ತಿ" ಆಗಿರಲಾರದು; ಸುವಾರ್ತೆಯು ಶಕ್ತಿಯಾಗಿದೆ (ರೋಮಾಪುರ 1:16)! "ಹೆಚ್ಚಿನ ಅದ್ಭುತಗಳು" ನಮಗೆ ಅವಶ್ಯವಿಲ್ಲ; ನಮಗೆ ಹೆಚ್ಚಿನ ಸುವಾರ್ತೆಯ ಅವಶ್ಯಕತೆ ಇದೆ!

ನ್ಯಾಯಮಂಡಳಿಯು ಈ ಮುಗ್ಧ ಜನರೊಂದಿಗೆ ಏನುಮಾಡಬೇಕೆಂಬ ಧರ್ಮಸಂಕಟದ ಬಗೆಗೆ ಯೋಚಿಸಲು ಎಷ್ಟು ಸಮಯ ತೆಗೆದುಕೊಂಡಿತೋ ನಾವರಿಯೆವು. ಅಂತಿಮ ವಾಗಿ, ಯಾರೋ ಒಬ್ಬರು ಸೂಚನೆ ಇಟ್ಟರು: "ಮುಂದೆ ಆ ಹೆಸರನ್ನು ಎತ್ತಿ ಯಾರ ಸಂಗಡವೂ ಮಾತನಾಡಬಾರದೆಂದು *ಅವರನ್ನು* ಬೆದರಿಸೋಣ" (ವಚನ 17ಬಿ) ಎಂಬುದು. ಪೇತ್ರ ಮತ್ತು ಯೋಹಾನರು ಧೈರ್ಯದಿಂದ ಮಾತಾಡಿದ್ದರಿಂದ, ಯೆಹೂದಿ ನಾಯಕರುಗಳು ಅವರಿಗೂ ಮತ್ತು ಉಳಿದ ಅಪೊಸ್ತಲರಿಗೂ ಇನ್ನೂ ಭಯಹುಟ್ಟಿಸುವ ನಿರೀಕ್ಷೆಯಲ್ಲಿದ್ದಾರೆ. ಬಹಳ ಹಿಂದೇ ನಲ್ಲ ಯೇಸು ಹಿಡಿಯಲ್ಪಟ್ಟಾಗ, ಅಪೊಸ್ತಲರು ಭಯದಿಂದ ಓಡಿಹೋಗಲಿಲ್ಲವೇ? ಆದ್ದರಿಂದ ಅವರು ಅಪೊಸ್ತಲರಿಗೆ ಯೇಸುವಿನ ಹೆಸರಿನಲ್ಲಿ ಮಾತನಾಡಬಾರದೆಂದು ಎಚ್ಚರಿಸಲು ನಿರ್ಧರಿಸಿದರು.

"ಯಾರ ಸಂಗಡಲೂ ಮಾತನಾಡಬಾರದು" ಎಂಬ ಮಾತುಗಳ ಬಗೆಗೆ ಕೆಲ ಕ್ಷಣ ಯೋಚಿಸಿರಿ. ನ್ಯಾಯಮಂಡಳಿಯು ಪೇತ್ರ ಮತ್ತು ಯೋಹಾನರಿಗೆ "ಯೇಸುವಿನ ಹೆಸರಿನಲ್ಲಿ ಮಾತನಾಡಬಾರದು ಅಥವಾ ಬೋಧಿಸಬಾರದು" (ವಚನ 18; ಒತ್ತಿ ಹೇಳಿದ್ದು ನನ್ನದು). ಎಂದು ಆಜ್ಞೆಮಾಡಲು ಯೇಸುವಿನ ಹೆಸರನ್ನು *ಸಂಪೂರ್ಣವಾಗಿ* ಬಹಿಷ್ಕರಿಸುವಂತೆ ನೋಡಿ ಕೊಳ್ಳುವದು ಅವರಿಗೆ ಮನದಿಚ್ಛೆಯಾಗಿತ್ತು. ಅವರ ಯೋಚನೆಯೆನೆಂದರೆ ಯೇಸುವಿನ ಬಗೆಗೆ ಎಲ್ಲಿಯಾದರೂ ಮಾತನಾಡುವುದನ್ನು, ಯಾವ ರೀತಿಯಲ್ಲಿ, ಯಾವುದೇ ಸ್ಥಳದಲ್ಲಿ ಯಾದರೂ ನಿಷೇಧಿಸಬೇಕೆಂಬುದೇ ಅವರ ಯೋಜನೆಯಾಗಿತ್ತು. ಅಪೊಸ್ತಲರು ಮತ್ತು ಇತರ ಎಲ್ಲಾ ಕ್ರೈಸ್ತರು ಈ ಶಾಸನಕ್ಕೆ ವಿಧೇಯರಾಗಿದ್ದೇ ಆದರೆ, ಯೇಸುವಿನ ಹೆಸರು ಯಾವ ಮೂಲೆಯಲ್ಲೂ ಕೇಳಿ ಬರುತ್ತಿರುತ್ತಿರಲಿಲ್ಲ!

ಈಗ ನಾವು ವಿರೋಧ ವ್ಯಕ್ತಪಡಿಸಲು ಸಿದ್ಧರಾಗಿರಬಹುದು, "ಒಂದು ಕ್ಷಣ ಕಾಯಿರಿ! ನ್ಯಾಯಮಂಡಲಿಗೆ ಇಂತಹ ಅವಿವೇಕದ ಬೇಡಿಕೆಯನ್ನು ಮಾಡುವುದಕ್ಕೆ ಯಾವ ಹಕ್ಕೂ ಇಲ್ಲ! ಪೇತ್ರ ಮತ್ತು ಯೋಹಾನರು ಧರ್ಮಶಾಸ್ತ್ರಕ್ಕೆ ಅವಿಧೇಯರಾಗಿರಲಿಲ್ಲ. ಯಾವುದೇ ಶಿಕ್ಷೆಗೆ ಯೋಗ್ಯರು ಆಗಿರಲಿಲ್ಲ. ನ್ಯಾಯಮಂಡಲಿಯು ಏನನ್ನು ಯೋಚಿಸಿತೋ ಅದು ಯೋಗ್ಯವಾ ಗಿರಲಿಲ್ಲ!" ಸೈತಾನನು ಯೋಗ್ಯನು ಎಂದು ಯಾರು ಹೇಳುತ್ತಾರೆ? ವರ್ಷಗಳುದ್ದಕ್ಕೂ ಕ್ರೈಸ್ತರು ಅನೇಕ ಸಾರಿ ಕುಟಿಲವಾದ ಜನರ ಜೊತೆ ವ್ಯವಹರಿಸುತ್ತಾ ಸದಾ ಗಲಿಬಿಲಿಯುಳ್ಳವರೂ ಮತ್ತು ನಿರಾಶೆಯುಳ್ಳವರೂ ಆಗುವುದನ್ನು ನಾನು ಕಂಡುಕೊಂಡಿದ್ದೇನೆ. "ನಾನು ಖಂಡಿತ ವಾಗಿ ಇದನ್ನು ಅಥವಾ ಆತನನ್ನು ಅರ್ಥಮಾಡಿಕೊಂಡಿಲ್ಲ" ಎಂಬ ಈ ಭಾವನೆ ವ್ಯಕ್ತವಾ ಗುವುದನ್ನು ಕೇಳಿದ್ದೇನೆ. ಈ ಮಾತನ್ನು ಕೇಳಿದಾಗ ನಾನು ಸಾಮಾನ್ಯವಾಗಿ "ನೀನು ಇದನ್ನರ್ಥ ಮಾಡಿಕೊಳ್ಳದೆ ಇರುವುದಕ್ಕೆ ಸಂತೋಷಿಸುತ್ತೇನೆ. ಇದು *ನಿಮ್ಮ* ಮನಸ್ಸಿನಲ್ಲಿ

ಕಪಟತನವು ಇಲ್ಲದೆ ಇರುವುದರ ಬಗೆಗೆ ತೋರಿಸುತ್ತದೆ ಎಂದು ಉತ್ತರಿಸುತ್ತೇನೆ!"[5]

ಸೈತಾನನು ಕಠಿಣ ಸಮಯವನ್ನು ಕೊಟ್ಟಾಗ, ನಿನ್ನ ಜೊತೆ ಆತನ ಅಯೋಗ್ಯವಾದದನ್ನು ಮಾಡಿದಾಗ ಆಶ್ಚರ್ಯಗೊಳ್ಳದಿರು. ಅದು ಆತನ ಸ್ವಭಾವವಾಗಿದೆ. ಆತನ *ಕಪಟತನದ* ಕಾರ್ಯಗಳನ್ನು ನೀನು ನಿರೀಕ್ಷಿಸು. ನೀನು ಕೇವಲ ಜಾಗರೂಕನಾಗಿರು. ಆತನ ಉದಾಹರಣೆಯನ್ನು ಅನುಸರಿಸ ಬೇಡ (ಆತನ ನಿಯಮಗೊಳೊಡನೆ ಆಡಬೇಡ!) ಎಂಬುದನ್ನು ನೆನಪಿಡು!

## ಸೈತಾನನಿಗೆ ಒಂದು ಇಂಚನ್ನು[6] ಕೊಡದಿರಿ (4:18-22)

ನ್ಯಾಯಮಂಡಳಿಯವರು ಪೇತ್ರ ಮತ್ತು ಯೋಹಾನರನ್ನು ಕೋಣೆಯೊಳಗೆ ತಿರುಗಿ ಕರೆದರು. "ಆ ಯೇಸುವಿನ ಹೆಸರನ್ನು ಎತ್ತಿ ಹೇಗೋ, ಮಾತನಾಡಬಾರದು, ಉಪದೇಶ ಮಾಡಲೂಬಾರದು ಎಂದು ಅವರಿಗೆ ಖಂಡಿತವಾಗಿ ಅಪ್ಪಣೆಕೊಟ್ಟರು" (ವಚನ 18). ಪರಿಸ್ಥಿತಿಯ ಗಂಭೀರತೆಯನ್ನು ಲಘುವಾಗಿ ಎಣಿಸದಿರು. ಆ ಪ್ರದೇಶದ ಉನ್ನತವಾದ ನ್ಯಾಯಸ್ಥಾನವು ತನ್ನ ನಿರ್ಧಾರವನ್ನು ಕೊಡಮಾಡಿತು. ಇಸ್ರಾಯೇಲಿನ ಅತಿಶಕ್ತಿಶಾಲಿ ಶಾಸನ ಮಾಡುವ ಸಮಿತಿಯು ಆ ಕಾರ್ಯವನ್ನು ಪಾಸು ಮಾಡಿತು: ಈಗ ಯೇಸುವಿನ ಬಗ್ಗೆ ಮಾತನಾಡುವುದಾಗಲಿ ಬೋಧಿಸುವುದಾಗಲಿ ಈಗ ಕಾಯಿದೆಬಾಹಿರವಾಗಿತ್ತು!

ನ್ಯಾಯಮಂಡಳಿಯ ಜನರು ಕೂಡಿಬರುವುದನ್ನು ಕಾಯಿದೆ ಬಾಹಿರ ಮಾಡಲಿಲ್ಲದ್ದನ್ನು ಈಗ ಗಮನಿಸಿ. ಅವರು ಹಾಡುವುದನ್ನು ಪ್ರಾರ್ಥಿಸುವುದಕ್ಕಾಗಿಯೂ ನಿಷೇಧಿಸಲಿಲ್ಲ. ಅವರು ಒಳ್ಳೆಯ ಕಾರ್ಯಗಳನ್ನು ಮಾಡುವುದಕ್ಕಾಗಿ ಅವರಿಗೆ ನಿಷೇಧವು ಇರಲಿಲ್ಲ. ಅವರು ಕೇವಲ ಯೇಸುವಿನ ಹೆಸರಿನಲ್ಲಿ ಮಾತನಾಡುವುದನ್ನು ಬೋಧಿಸುವುದನ್ನೂ ಮಾಡಬಾರದು ಎಂದು ಘೋಷಿಸಿದರು. ಸೈತಾನನು ಸುವಾರ್ತೆಗೆ ಮಾತ್ರ ಭಯಪಡುತ್ತಾನೆ! ನಾನು ಒಟ್ಟಾಗಿ ಕೂಡಿಬರುವುದರಲ್ಲಿ. ತರಗತಿಗೆ ಹೋಗುವಲ್ಲಿ ಮತ್ತು ಕುಟುಂಬಗಳಲ್ಲಿ ಆರಾಧನೆ ಮಾಡುವಲ್ಲಿ ಆತನು ಚಿಂತೆ ಮಾಡನು. ನಾವು ಒಳ್ಳೆಯ ಕಾರ್ಯಗಳನ್ನು ಮಾಡಿದಾಗ ಮತ್ತು ಇತರರಿಗೆ ಸಹಾಯ ಮಾಡಿದಾಗಲೂ ಕೂಡ ಆತನು ವಿಚಲಿತನಾಗುವುದಿಲ್ಲ (ಯೇಸುವಿನ ಹೆಸರನ್ನು ಮೇಲೆ ಒತ್ತಿ ಹೇಳುವವರೆಗೆ).[7] "ಇನ್ನೊಂದೆಡೆ ನಾವು ಹಾದಿಗಳಿಗೂ ಬೇಲಿಗಳ ಬಳಿಗೂ ಹೋಗಿ" (ಲೂಕ 14:23), ಯೇಸುಕ್ರಿಸ್ತನ ಬಳಿಗೆ ಬರಲು ಆಮಂತ್ರಿಸಲು, ಆತನು ಬಹು ವಾಗಿ ನಿರ್ಬಲನಾಗುತ್ತಾನೆ. ಶಿಲುಬೆಯು ಆತನನ್ನು ಸಂಪೂರ್ಣ ನಾಶಪಡಿಸುತ್ತದೆ ಎಂದು ಆತನು ತಿಳಿದಿದ್ದಾನೆ (ಪ್ರಕಟನೆ 12:11)! ದುರ್ದೈವಶಾತ್, ಅಪೊಸ್ತಲರಿಗೆ ಯೇಸುವಿನ ಹೆಸರಿನಲ್ಲಿ "ಮಾತನಾಡ*ಬಾರದು* ಅಥವಾ ಬೋಧಿಸಬಾರದು" ಎಂದು ಆಜ್ಞಾಪಿಸಲ್ಪಟ್ಟಿತು ಆದರೆ ನಮಗಾದರೋ ಆತನ ಹೆಸರಿನಲ್ಲಿ ಮಾತನಾಡಲು ಅಥವಾ ಬೋಧಿಸಲು ಆಜ್ಞೆಯು ಯೇಸುವಿನಿಂದ ಕೊಡಲ್ಪಟ್ಟಿದೆ!

ತಿರುಗಿ ನಾನು ಕೇಳುತ್ತೇನೆ, ಅಪೊಸ್ತಲರು ಮಂಡಳಿಯ ಆಜ್ಞೆಗೆ ವಿಧೇಯರಾದರೇ? ಅಪೊಸ್ತಲರ ಸಭೆಯ ಇತಿಹಾಸದಲ್ಲಿ ಚಿಂತಾಜನಕ ಕ್ಷಣವು ಇದಲ್ಲವೇ! ನೀವು ಯಾವಾ ಗಲಾದರೂ ಮಳೆಯಾದ ನಂತರ ಕಟ್ಟಿಗೆಯ ಉರಿಯನ್ನು ಹಚ್ಚಲು ಪ್ರಯತ್ನಿಸಿದ್ದೀರಾ? ಚಿಕ್ಕ ಉರಿಯೂ ಉರಿಯಲು ನೀವು ಬಹು ಪ್ರಯಾಸಪಡಬೇಕು. ನೀವು ಒಣಹುಲ್ಲನ್ನು ಕೂಡಿಸ ಬೇಕು. ಸಣ್ಣ ಬೊಂಗೆಯೂ ಬೆಂಕಿಯು ಆಗುವವರೆಗೂ ಅದನ್ನು ಪ್ರಯತ್ನಿಸುತ್ತಲೇ ಇರಬೇಕು. ಗಾಳಿಯನ್ನು ಊದುವಿಕೆ, ಹಸಿಯಾದ ಕಟ್ಟಿಗೆಯನ್ನು ಹಾಕುವದು ಹೀಗೆ ನಿಮಗೆ ಈ ರೀತಿಯ ಅನುಭವವನ್ನು ಹೊಂದಿದ್ದಾದರೆ ನೀವು ಬೆಂಕಿಯನ್ನು ನಂದಿಸಲು ಬಲು ಸಮಯವು ಬೇಕಾಗಿಲ್ಲ. ಗಾಳಿಯನ್ನು ಬಡೆಯುತ, ಹಸಿಯಾದ ಕಟ್ಟಿಗೆಯನ್ನು ಹಾಕುವದು ಇಂಥ ಮೊದಲಾದವುಗಳಿಂದ ಬೆಂಕಿಯನ್ನು ನಂದಿಸಬಹುದು - ಡಝನ್‌ಗಟ್ಟಲೇ ಕ್ಲಿಷ್ಟಗಳು ಚಿಕ್ಕ ಬೆಂಕಿಯನ್ನು ನಂದಿಸುತ್ತೇವೆ. ಆ ಸಮಯದಲ್ಲಿ ಪೇತ್ರ ಯೋಹಾನರು ಸನ್ಹೆದ್ರೀನಿನ ಮುಂದೆ

ನಿಂತರು. ಸಭೆಯು ಒಂದು ಚಿಕ್ಕ ಉರಿಯಂತೆ ಇದೆ.[8] ಒಂದು ವೇಳೆ ಶಾಸನಕ್ಕೆ ಅವರು ಒಳಗಾದದ್ದೇ ಆದರೆ, ಎಂಥ ಭಿನ್ನವಾದ ಜಾಗತಿಕ ಇತಿಹಾಸವು ಸೃಷ್ಟಿಯಾಗುತ್ತಿತ್ತಲ್ಲವೇ![9]

ಪೇತ್ರ ಮತ್ತು ಯೋಹಾನರು ಸೈತಾನನಿಗೆ ಒಂದು ಇಂಚನ್ನೂ ಕೊಡಲಾರೆವು ಎಂದು ಧೃಢನಿಶ್ಚಯ ಮಾಡಿಕೊಂಡಿದ್ದರು! ಒಂದು ವೇಳೆ ನನಗೆ ಹೀಗೆ ಆಜ್ಞಾಪಿಸಲ್ಪಟ್ಟದ್ದೇ ಆದರೆ, ಆ ಆಜ್ಞಾವಿಧಿಗೆ ನಾನು ಒಳಗಾಗಬಾರದೆಂದು ಯೇಚಿಸಿದ್ದೇ ಆದರೆ - ನನ್ನ ಉದ್ದೇಶಗಳಿಗಾಗಿ ನಾನು ನನ್ನ ಬಾಯನ್ನು ಮುಚ್ಚಿಕೊಂಡಿರುತ್ತಿದ್ದೆನು. ಆದರೆ ಅಪೊಸ್ತಲರು ಹಾಗೆ ಮಾಡಲಿಲ್ಲ. ಹಾಗೇ ಮಾಡಿದ್ದೇ ಆದರೆ "ಮೌನವು ಸಮ್ಮತಿ" ಎಂದು ತಪ್ಪಾಗಿ ಅರ್ಥ ಕೊಡಬಹುದಾಗಿತ್ತು. "ಅದಕ್ಕೆ ಪೇತ್ರ ಮತ್ತು ಯೋಹಾನರು ಅವರಿಗೆ ದೇವರ ಮಾತನ್ನು ಕೇಳುವುದಕ್ಕಿಂತ *ನಿಮ್ಮ* ಮಾತನ್ನು ಕೇಳುವುದು *ದೇವರ* ಮುಂದೆ ನ್ಯಾಯವೋ ಏನು ನೀವೇ ತೀರ್ಮಾನ ಮಾಡಿರಿ" (ವಚನ 19; ಒತ್ತಿ ಹೇಳಿದ್ದು ನನ್ನದು) ಎಂದು ಹೇಳಿದರು.

ಇದಕ್ಕೆ ಪ್ರಯುಕ್ತವಾಗಿ ಅಪೊಸ್ತಲರು, "ನೀವು ರಾಷ್ಟ್ರದ ನ್ಯಾಯಾಧಿಪತಿಗಳಾಗಿ ನೋಡಲ್ಪಡುತ್ತಿದ್ದೀರಿ. ಆದ್ದರಿಂದ ಇದನ್ನು ನಿರ್ಣಯಿಸಲು ನಿಮಗ್ಯಾವ ತೊಂದರೆ ಇರಕೂಡದು: ನಾವು ನಿಮಗೆ ವಿಧೇಯರಾಗಬೇಕೋ? ಅಥವಾ ದೇವರಿಗೆ ವಿಧೆಯರಾಗಬೇಕೋ?" ಎಂದು ಕೇಳಿದರು. ಅವರ ಪ್ರಶ್ನೆಯು ನ್ಯಾಯಸಭೆಗೆ ಧರ್ಮಸಂಕಟವನ್ನು ತಂದು ಒಡ್ಡಿತು.[10] ರಾಷ್ಟ್ರದ ರಾಜಕೀಯ ಪ್ರಶಂಸೆಗಳಿಗಾಗಿ ಅವರು ಉತ್ತರವನ್ನು ಕೊಡಬೇಕು ಎಂದು ತಿಳಿದಿದ್ದರು. "ದೇವರಿಗೆ ವಿಧೇಯರಾಗುವಂತದ್ದು ಉಳಿದೆಲ್ಲವುಗಳಿಗಿಂತ ಮೊದಲ ಪ್ರಾಶಸ್ತಿ ಪಡೆಯಬೇಕು"; ಆದರೆ ಜನರು ಅಧಿಕಾರ ಮತ್ತು ಸ್ಥಾನದ ಬಗೆಗೆ ಹೆಚ್ಚು ಚಿಂತಿಸುವುದರಿಂದ, ಅವರು ಅಪೊಸ್ತಲರಿಗೆ ಅವಕಾಶವನ್ನು ಕೊಟ್ಟು ತಮ್ಮನ್ನು ಸಿಕ್ಕಿಸಿಕೊಳ್ಳುವ ಧೈರ್ಯವನ್ನು ಮಾಡಲಿಲ್ಲ.

ಸಭೆಯ ಉತ್ತರವೂ ಏನೇ ಆದರೂ, ಪೇತ್ರ ಮತ್ತು ಯೋಹಾನರು ನಿರ್ಧಿಷ್ಟ ಕಾರಣವನ್ನು ಕೈಕೊಳ್ಳುವುದಕ್ಕಾಗಿ ಸಮರ್ಪಿತರಾಗಿದ್ದರು "ನಾವಂತೂ ಕಂಡುಕೇಳಿದ್ದನ್ನು ಹೇಳದೆ (ಮಾತನಾಡದೇ) ಇರಲಾರೆವು ಎಂದು ಉತ್ತರ ಕೊಟ್ಟರು" (ವಚನ 20)! ಮಾತನಾಡುವದು ಒಬ್ಬನ "ನೋಡಿದ್ದದರ ಮತ್ತು ಕೇಳಿದ್ದದುರ" ಬಗೆಗೆ ಹೇಳಬೇಕಾದರೆ ಸಾಕ್ಷಿಯಾಗುವದರ ಪ್ರಾಥಮಿಕ ವ್ಯಾಖ್ಯಾನವು ಆಗಿದೆ! ಯೇಸು ಅವರಿಗೆ ತನ್ನ ಸಾಕ್ಷಿಗಳಾಗುವ ನಿಯೋಗವನ್ನು ನೇಮಿಸಿದನು (1:8); ಅವರಿಗೆ ಬೇರೆ ಆಯ್ಕೆಯು ಇರಲಿಲ್ಲ! ನೀನು ಸೂರ್ಯನಿಗೆ ಮೂಡದಿರು ಎಂದಾಗಲಿ ಹಕ್ಕಿಗಳಿಗೆ ಹಾಡದಿರು ಎಂದಾಗಲೀ ಮತ್ತು ತಾಯಂದರಿಗೆ ನಿಮ್ಮ ಮಕ್ಕಳನ್ನು ಪ್ರೀತಿಸದಿರಿ ಎಂದಾಗಲಿ ಅಪ್ಪಣೆಮಾಡುವಂತೆಯೇ ಅಪೊಸ್ತಲರಿಗೆ ಯೇಸುವಿನ ಬಗೆಗೆ ಬೋಧಿಸಬಾರದೆಂಬ ಆಜ್ಞೆಯೂ ಆಯಿತು![11]

ನೀವು ಮತ್ತು ನಾನು ಯೇಸುವಿನೊಡನೆ ಗಲಿಲಾಯ ಮತ್ತು ಯೂದಾಯದ ಮಾರ್ಗದಲ್ಲಿ ನಡೆದಾಡಿಲ್ಲ. ಆದರೆ ಮಾರ್ಕ, ಲೂಕ, ಮತ್ತು ಯೋಹಾನರಲ್ಲಿ, ಆ ಅನುಭವವನ್ನು ಪಡೆಯಬಹುದು.[12] ಮುಂದೆ, ಜೀವನದಲ್ಲಿ ನಾವು ಸಾಗುವಾಗ ಮುಂದೆಯೂ ಕೂಡಾ ನಮ್ಮನ್ನು ಬಲಪಡಿಸುತ್ತಾ ಇದ್ದಾನೆ ಆತನು ನಮ್ಮ ಪಕ್ಕದಲ್ಲಿದ್ದಾನೆ. ಅಪೊಸ್ತಲರಂತೆ, "ನಾವು ಇತರರಿಗಾಗಿ ಸುವಾರ್ತೆಯನ್ನು ಹೇಳಲೇ ಬೇಕು. ನಾವು ಎಂದಿಗೂ ಸುವಾರ್ತೆಯ ಬಗೆಗೆ *ಮಾತನಾಡುವುದನ್ನು ಮತ್ತು ಬೋಧಿಸುವುದನ್ನು* ನಿಲ್ಲಿಸಲಾರೆವು" ಎಂದು ಹೇಳಬೇಕು!

"ಅವರನ್ನು[13] ಇನ್ನುಷ್ಟು ಬೆದರಿಸಿ ಬಿಟ್ಟುಬಿಟ್ಟರು ..." (21ಎ). ಈ ಬೆದರಿಕೆಗಳು ಹೆದರಿಸುವ ಬೆದರಿಕೆಗಳಾಗಿರಲಿಲ್ಲ ಸ್ವಲ್ಪಸಮಯದ ನಂತರ ಅಪೊಸ್ತಲರು ಸೆರೆಹಿಡಿಯಲ್ಪಟ್ಟರು ಮತ್ತು ಹೊಡೆಯಲ್ಪಟ್ಟರು (5:17-40). ತದನಂತರ ಸ್ತೆಫನನು ಕೊಲ್ಲಲ್ಪಟ್ಟನು (6:8-7:60).

> ... ಜನರೆಲ್ಲರು[14] ದೇವರನ್ನು ಕೊಂಡಾಡುತ್ತಾ ಇದ್ದ ಕಾರಣ ಅವರ ದೆಸೆಯಿಂದ ಸಭಿಕರು ಅಪೊಸ್ತಲರನ್ನು ದಂಡಿಸತಕ್ಕ ಉಪಾಯವನ್ನು ಕಾಣದೆ (ಅವರನ್ನು

ಶಿಕ್ಷಿಸಬಹುದಾದ ಯಾವ ಮೂಲಗಳೂ ಅವರಿಗೆ ಸಿಕ್ಕಲಿಲ್ಲ)[15] ಅವರನ್ನು ಇನ್ನಷ್ಟು ಬೆದರಿಸಿ ಬಿಟ್ಟುಬಿಟ್ಟರು. ಈ ಸೂಚಕಕಾರ್ಯದಿಂದ ಸ್ವಸ್ಥತೆ ಹೊಂದಿದ ಆ ಮನುಷ್ಯನಿಗೆ ನಾಲ್ವತ್ತು ವರ್ಷಕ್ಕಿಂತ ಹೆಚ್ಚು ವಯಸ್ಸಾಗಿತ್ತು[16] (ವಚನಗಳು 21ಬಿ, 22).

ಜನರ ಕಣ್ಣಲ್ಲಿ, ಇಬ್ಬರು ಅಪೊಸ್ತಲರು ದೇವರ ವಿಷೇಶ ಸೇವಕರಾಗಿದ್ದರು, ಆದ್ದರಿಂದ ಅವರಿಗೆ ಏನನ್ನೂ ಮಾಡಲು ಮಂಡಲಿಯು ಧೈರ್ಯಮಾಡಲಿಲ್ಲ.[17]

## ನಿಮ್ಮಬಲದ ಮೂಲದ ಹತ್ತಿರವೇ ವಾಸಿಸಿ (4:23-27)

ವಚನ 23ರಿಂದ 31ವರೆಗೆ ಅಪೊಸ್ತಲರ ಬಲದ ಮೂಲವನ್ನು ನಾವು ಕಂಡುಕೊಳ್ಳಬಹುದು. ಈ ದಿನ ಅನೇಕ ಸಾರಿ ನಾವು ಸಂಬಳವನ್ನು ಪಡೆದು ಬೋಧಿಸುವ ಬೋಧಕರು ಮತ್ತು ಇತರ ಕೆಲಸಗಾರರು, ಚರ್ಚಿನ ಕಟ್ಟಡಗಳು ಮತ್ತು ಕಾರ್ಯಕ್ರಮಗಳು, ಕ್ರಿಶ್ಚಿಯನ್ ವಿಶ್ವವಿದ್ಯಾಲಯಗಳು ಮತ್ತು ವಿದ್ಯಾಲಯಗಳ ಮೇಲೆ ಆತುಕೊಂಡಿರುತ್ತೇವೆ.[18] ಆದರೆ ಆದಿಸಭೆಗೆ ಅವೆಲ್ಲವುಗಳೂ ಇರಲಿಲ್ಲ. ಕ್ರೈಸ್ತರು ಏನನ್ನು ಹೊಂದಿದ್ದರು? ಅವರು ದೇವ ರೊಂದಿಗೆ ತಮ್ಮ ತಮ್ಮಲ್ಲಿ ಒಬ್ಬರಿಗೊಬ್ಬರು ಬಲವಾಗಿ ಕಟ್ಟಲ್ಪಟ್ಟಿದ್ದರು!

ನ್ಯಾಯಮಂಡಳಿಯು ಪೇತ್ರ ಮತ್ತು ಯೋಹಾನರನ್ನು ಹೋಗಲು ಬಿಟ್ಟಾಗ ಅಪೊಸ್ತಲರು ತಕ್ಷಣವೇ ವಿಶ್ವಾಸಿಗಳನ್ನು ಹುಡಿಕಿಕೊಂಡು ಹೋದರು. "ಇವರು ಬಿಡುಗಡೆ ಹೊಂದಿ ಸ್ವಂತ ಜನರ ಬಳಿಗೆ ಹೋಗಿ ಮಹಾಯಾಜಕರೂ ಹಿರಿಯರೂ ತಮಗೆ ಹೇಳಿದ ಮಾತುಗಳನ್ನೆಲ್ಲ ತಿಳಿಸಿದರು" (ವಚನ 23). KJVಯಲ್ಲಿ "ಆಪ್ತೇಷ್ಟರು" ಎಂದಿದೆ NIVಯಲ್ಲಿ "ತಮ್ಮ ಸ್ವಂತ ಜನರು"[19] ಎಂದಿದೆ ಮೂಲ ಭಾಷೆಯಲ್ಲಿ ತಮ್ಮ ಸ್ವಂತ ಜನರು ಎಂದಿದೆ. ಹೀಗೆ ವಿಭಿನ್ನ ವಾದ ಭಾಷಾಂತರಕಾರರು ಈ ರೀತಿಯ ಪದಗಳನ್ನು ಒದಗಿಸಿದ್ದಾರೆ. ಪೇತ್ರ ಯೋಹಾನರು ಹೋದದ್ದು ಇತರ *ಅಪೊಸ್ತಲರ ಬಳಿಗೆ* ಎಂದು ನಾನು ನಂಬುತ್ತೇನೆ: (1) ಈ ವಿಚಾರದಲ್ಲಿ, ನಾವು ಕೇವಲ ಅಪೊಸ್ತಲರ ಬೋಧನೆ ಮತ್ತು ಪ್ರಬೋಧನೆಗಳನ್ನು ಮಾತ್ರ ಓದಿದ್ದೇವೆ, ಹೀಗೆ ಮಂಡಳಿಯ ಬೆದರಿಕೆಯು ಅವರಿಗೆ ನೇರವಾಗಿ ಅನ್ವಯವಾಯಿತು. (2) ಪ್ರಾರ್ಥನೆ ಮಾಡುವವರು ಧೈರ್ಯ ಮತ್ತು ಶಕ್ತಿಗಾಗಿ ಪ್ರಾರ್ಥಿಸಿದರು (4:29, 30) ಅವುಗಳು (ಈ ಸಂಗತಿಗಳು) ಅಪೊಸ್ತಲರಿಗೆ ಹೆಚ್ಚು ಅನ್ವಯಿತವಾಗಿದ್ದವು. (3) ಈ ಸ್ಥಳವು ಅಲುಗಾಡಿದಾಗ ಅಲ್ಲಿದ್ದವರೆಲ್ಲರೂ ಪವಿಶುದ್ಧಾತ್ಮನಿಂದ ತುಂಬಲ್ಪಟ್ಟರು (4:31); ತಕ್ಷಣದ ನಂತರ, ಅಪೊಸ್ತಲರು ಶಕ್ತಿಯಿಂದ ತುಂಬಿದ್ದಾರೆ ಎಂದು ಗಮನಿಸಲಾಯಿತು (4:33; 5:12). (4) ಮಂಡಳಿಯು ತನ್ನ ಶಾಸನವನ್ನು ಉಲ್ಲಂಘಿಸಿದ ಕೆಲವರನ್ನು ಸೆರೆಹಿಡಿದಾಗ (5:28), ಹಾಗೆ ಸೆರೆ ಹಿಡಿಯಲ್ಪಟ್ಟವರಲ್ಲಿ ಅಪೊಸ್ತಲರು ಒಬ್ಬರಾಗಿದ್ದರು (5:18).

"ತಮ್ಮಸ್ವಂತ ಜನರು" ಎಂಬ ಪದಪುಂಜವು ಯಾರಿಗೇ ಸಂಬಂಧಿಸಿರಲಿ, ಸೈತಾನನು ಕಠಿಣ ಸಮಯವನ್ನು ಎದುರುಮಾಡಿದಾಗ ಪೇತ್ರ ಯೋಹಾನರಿಗೆ ತಮಗೆ ಸಹಾಯಮಾಡಬಹುದಾದ ಅವರದೇ ಆದ ನಿರ್ಧಿಷ್ಟ ಜನರು ಅವರ ಮನಸ್ಸಿನಲ್ಲಿದ್ದರು. ಯೇಸುವಿಗೆ ಸ್ನೇಹಿತರ ಅವಶ್ಯಕತೆಯು ಇತ್ತು. ಹಾಗೆಯೇ ಅಪೊಸ್ತಲರಿಗೂ ಕೂಡಾ. ಹಾಗೇ ನಮ್ಮಲ್ಲಿ ಪ್ರತಿಯೊಬ್ಬರಿಗೂ ಸಹ. ಇದೇ ಒಂದು ಕಾರಣದಿಂದ ದೇವರು ಸಭೆಯನ್ನು ಸ್ಥಾಪಿಸಿದನು. ನಾವು ನಿಷ್ಟಾವಂತ ಸ್ನೇಹಿತರಿಂದ ಬಲವನ್ನು ಪಡೆದುಕೊಳ್ಳಬೇಕೆಂದು ದೇವರು ಅಪೇಕ್ಷಿಸುವವನಾಗಿದ್ದಾನೆ. ನೀನು ಒಂದು ವೇಳೆ ಸೈತಾನನ ದಾಳಿಗೆ ಸಿದ್ಧನಾಗಿದ್ದೆ ಆದರೆ, ನಿನ್ನ ಸಹೋದರ ಮತ್ತು ಸಹೋದರಿಯರಲ್ಲಿ ಕ್ರಿಸ್ತನಲ್ಲಿ ಒಳ್ಳೆಯ ಸಂಬಂಧದಿಂದ ಬಲವಾಗಿ ಕಟ್ಟಲ್ಪಟ್ಟವನಾಗಿರು.

ಒಬ್ಬನು ಹೀಗೆ ಜಂಬಕೊಚ್ಚಿಕೊಳ್ಳಬಹುದು, "ನನಗೆ ಯಾರೊಬ್ಬನ ಅವಶ್ಯಕತೆಯು ಇಲ್ಲ, ನಾನಿದನ್ನು ನಾನೇ ಸ್ವಂತ ಮಾಡಿಕೊಳ್ಳುವೆನು!" ಎಂದು. ನಿನಗೆ ನಿನ್ನ ಸಹೋದರ

ಮತ್ತು ಸಹೋದರಿಯ ಅವಶ್ಯಕತೆಯು ಇಲ್ಲವಾದರೆ, ಅದರ ಬಗ್ಗೆ ಜಂಬಕೊಚ್ಚಿಕೊಳ್ಳಬೇಡ. ಇದು ಬಹುಶಃ ನೀನು ಈಗ ನಡೆಸುತ್ತಿರುವ ಜೀವಿತಕ್ಕೆ ಯಾವುದೇ ತರದ ಬಾಹ್ಯ ಪ್ರೋತ್ಸಾಹದ ಅವಶ್ಯಕತೆಯು ಇಲ್ಲ ಎಂದು ಅನಿಸಬಹುದು! ನೀವು ದೇವರಿಗಾಗಿ ಉರಿಯುವ ಬೆಂಕಿಯಾಗಿದ್ದಿದ್ದೇ, ಆದರೆ ಸೈತಾನನು ಇಂಥ ಕಠಿಣ ಸಮಯವನ್ನು ನಿನಗೆ ಎದುರುಮಾಡಿದಾಗ ಪೇತ್ರ ಮತ್ತು ಯೋಹಾನರ ಹಾಗೆ ನೀನು ನಿನ್ನ ಸಹ ಕ್ರೈಸ್ತರನ್ನು ಕಾಣಲು ಧಾವಿಸು!

ಪೇತ್ರ ಮತ್ತು ಯೋಹಾನರು ಬಲದ ಇನ್ನೊಂದು ಮೂಲವನ್ನು ಹೊಂದಿದ್ದಾರೆ, ಎಂಬುದನ್ನು ವಚನ 24ರಲ್ಲಿ ಕಾಣುತ್ತೇವೆ. ಒಂದು ವೇಳೆ ಅಪೊಸ್ತಲರು ನಮ್ಮ ಹಾಗೆ ಇರುವವರಾಗಿದ್ದರೆ, ವಚನ 24 ಹೀಗೆ ಪ್ರಾರಂಭವಾಗುತ್ತಿತ್ತು "ಇದನ್ನು ಕೇಳಿದಾಗ ಅವರು ಬಹುವಾಗಿ ಕುಂದಿಹೋದರು ಮತ್ತು ಹೀಗೆ ಹೇಳಿದರು ನಾವು ಎಲ್ಲಾ ಸಂಗತಿಗಳಲ್ಲಿ ಸರಿಯಾಗಿ ನಡೆಯುತ್ತವೆ ಎಂದು ತಿಳಿದಿದ್ದೆವು ಮತ್ತು ನಂಬಲಾರದಷ್ಟು ಸತ್ಯವಾಗಿತ್ತು!" ಅಥವಾ "ಅವರು ಅದನ್ನು ಕೇಳಿದಾಗ ಬಲು ಕೋಪಗೊಂಡರು ಮತ್ತು ಅವರ ಹಾಗೆ ಅದನ್ನು ನಮಗೆ ಮಾಡಲಾಗದು ಎಂದು ಹೇಳಿದರು ಮತ್ತು ಮಂಡಳಿಯು ನಡೆಯುತ್ತಿದ್ದ ಕೋಣೆಗೆ ಹೋದರು" ಎಂದೂ ಅಥವಾ ಅವರು ಇದನ್ನು ಕೇಳಿದಾಗ ಅಧಿಕಾರಿಗಳ ವಿರುದ್ಧ ದಿಕ್ಕಾರ ಹಾಕಲು ಆರಂಭಿಸಿದರು ಎಂದು ಓದುತ್ತಿದ್ದೆವು. ಬದಲಾಗಿ ನಾವು ಓದುವುದೇನೆಂದರೆ "ಇದನ್ನು ಕೇಳಿ ಏಕಮನಸ್ಸಿನಿಂದ[20] ದೇವರನ್ನು ಗಟ್ಟಿಯಾದ ಧ್ವನಿಯಿಂದ[21] ಪ್ರಾರ್ಥಿಸಿದರು ..." (ವಚನ 24) ಎಂದು ಓದುತ್ತೇವೆ. ಅಪೊಸ್ತಲರು ಬಲದ ದೊಡ್ಡ ಮೂಲವಾದ: ದೇವರೆಡೆಗೆ ಹೊರಳಿದರು.

ಸೈತಾನನು ನಮಗೆ ಕಠಿಣ ಸಮಯವನ್ನು ಎದುರುಮಾಡಿದಾಗ ಆ ಸಂದರ್ಭಗಳಿಗಾಗಿ, ಅವುಗಳನ್ನು ಎದುರಿಸಲು ಸಿದ್ಧರಾಗುವಾಗ ನಾವು ಕೇವಲ ಇತರ ಸಹೋದರರ ಜೊತೆ ನಿಕಟವಾದ ಸಂಬಂಧವನ್ನು ಇಟ್ಟುಕೊಳ್ಳುವದು ಅವಶ್ಯವಿದೆ, ಅದರ ಜೊತೆಗೆ ದೇವರೊಂದಿಗೂ ಕೂಡಾ. ಪ್ರಾರ್ಥನೆಯು ಹೊಣೆಗಾರಿಕೆಯಿಂದ ಪಲಾಯನವಾಗುವದು ಅಲ್ಲ, ಅದು ದೇವರ *ಸಾಮರ್ಥ್ಯದ*[22] ಜೊತೆಗೆ *ಸ್ಪಂದಿಸುವದು* ಆಗಿದೆ.

ವಚನ 24ರಿಂದ 30ರವರೆಗೆ, ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಎರಡನೆಯ ದಾಖಲಿತ ಪ್ರಾರ್ಥನೆಯು ನಮಗಿದೆ. ಹಿಂದಿನ ಪ್ರಾರ್ಥನೆಯು (ಯೂದನನ್ನು ಬದಲಾಯಿಸುವಿಕೆಗೆ ಸಂಬಂಧಿಸಿದಂತೆ) "ದೇವರು ಹೃದಯಗಳನ್ನು ತಿಳಿದಾತ" ಎಂದು ಒತ್ತಿ ಹೇಳುವಂತದ್ದಾಗಿದೆ (1:24). ಈ ಪ್ರಾರ್ಥನೆಯು ದೇವರ ಸಾರ್ವಭೌಮತ್ವವನ್ನು[23] ಒತ್ತಿ ಹೇಳುವಂತದ್ದು ಆಗಿದೆ. ಇದು "ಒಡಯನೇ, ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ಉಂಟುಮಾಡಿದಾತನೇ"[24] (24ಬಿ) ಎಂದು ಪ್ರಾರಂಭವಾಗುತ್ತದೆ. ಗ್ರೀಕ್ ಪದವಾದ "ಕರ್ತನು" ಇದು ಸಾಮಾನ್ಯ ಪದವಾದ (*kurios*) ಎಂಬುದಕ್ಕಲ್ಲ ಬದಲಾಗಿ *"ನಿರಂಕುಶ ಪ್ರಭು"* (*despotes*) ಎಂಬುದಾಗಿದ್ದು, ಸಂಪೂರ್ಣ ಬಲವನ್ನೂ ಹೊಂದಿದವನು[25] ಎಂದಾಗಿದೆ! ಹೀಗೆ ಅನೇಕ ಭಾಷಾಂತರಕಾರರು "ಸೌರ್ವಭೌಮನಾದ ಕರ್ತನು" ಎಂದು ಬಳಿಸಿದ್ದಾರೆ.[26] ಅವರು ಎಲ್ಲವನ್ನೂ ಸೃಷ್ಟಿಸಿದವನೂ ಎಲ್ಲದರ ಮೇಲೆ ಪ್ರಭುತ್ವ ಹೊಂದಿರುವವನೂ ಮತ್ತು ಪ್ರತಿಯೊಬ್ಬರ ಮೇಲೆ ನಿಯಂತ್ರಣವಿದ್ದವನೂ (ಸನ್ಹೆದ್ರೀನನ್ನು ಒಳಗೊಂಡು) ಇರುವಾತನಿಗೆ ತಮ್ಮ ವಿಜ್ಞಾಪನೆಯನ್ನು ಮಾಡಿದರು!

ಅಪೊಸ್ತಲರು ಎದುರಿಸುತ್ತಿರುವ ನಿರ್ಧಿಷ್ಟ ಸ್ಥಿತಿಯ ಮೇಲೆ ದೇವರಿಗಿರುವ ನಿಯಂತ್ರಣವನ್ನು ಮುಂದಿನ ನಾಲ್ಕು ವಚನಗಳಲ್ಲಿ ಒತ್ತಿಹೇಳಲಾಗಿದೆ. ಮೊದಲು ಅಲ್ಲಿ ದೇವರ ವಾಕ್ಯಕ್ಕೆ ಒಂದು ಮನವಿಯು ಇದೆ:[27]

> "ನೀನು ಪರಿಶುದ್ಧಾತ್ಮನ ಮೂಲಕವಾಗಿ ನಿನ್ನ ಸೇವಕನಾಗಿದ್ದ ನಮ್ಮ ಪಿತೃವಾದ ದಾವೀದನ[28] ಬಾಯಿಂದ ಅನ್ಯಜನಗಳು ಯಾಕೆ ರೇಗಿದರು?[29] - ಜನಾಂಗಗಳವರು

ವ್ಯರ್ಥಕಾರ್ಯಗಳನ್ನು ಯಾಕೆ ಯೋಚಿಸಿದರು? ಕರ್ತನಿಗೂ ಆತನು ಅಭಿಷೇಕಿಸಿದವನಿಗೂ ವಿರೋಧವಾಗಿ ಭೂಪತಿಗಳು ಸನ್ನದ್ಧರಾಗಿ ನಿಂತರು, ಅಧಿಕಾರಿಗಳು ಏಕವಾಗಿ ಕೂಡಿಕೊಂಡರು ಎಂದು ಹೇಳಿಸಿದಿಯಲ್ಲವೇ" (ವಚನಗಳು 25, 26).[30]

ಅಪೊಸ್ತಲರು ತಮ್ಮ ಸಹೋದರರೊಡನೆ ಮತ್ತು ದೇವರೋಡನೆ ಮಾತ್ರ ಹತ್ತಿರವಾಗಿ ಜೀವಿಸಲಿಲ್ಲ, ಅವರು ದೇವರ ವಾಕ್ಯಕ್ಕೂ ಹತ್ತಿರವಾಗಿ ಜೀವಿಸಿದರು. ಅವರು ಹಳೆಯ ಒಡಂಬಡಿಕೆಯ ಈ ಭಾಗವನ್ನು *ಓದಲಿಕ್ಕೆ* ಆಗಲಿಲ್ಲ (ಸಾಮಾನ್ಯ ಜನರು ದೇವವಾಕ್ಯದ ಸ್ವಂತ ಪ್ರತಿಯನ್ನು ಹೊಂದಿರಲಿಲ್ಲ) ಅವರು *ಕಂಠಪಾಠ* ಮಾಡಿದ್ದರು. ನೀವು ಒಂದು ವೇಳೆ ಸೈತಾನನ ದಾಳಿಗೆ ಸಿದ್ಧರಾಗುವುದೆ ಆದರೆ, ಇನ್ನೊಂದು ಮುಖ್ಯವಾದ ಶಕ್ತಿಯ ಮೂಲ ಎಂದರೆ ದೇವರ ವಾಕ್ಯ! ಅದನ್ನು ಓದಿರಿ! ಅದನ್ನು ಅಧ್ಯಯನ ಮಾಡಿರಿ; ಬಾಯಿಪಾಠ ಮಾಡಿರಿ!

ಕೀರ್ತನೆ 2ರ ವ್ಯಾಖ್ಯೆಯು ಮೊದಲ "ರಾಜ ಕೀರ್ತನೆ" ಎಂದಾಗಿದೆ.[31] ರಾಜರ ಮಧ್ಯದಲ್ಲಿ ಸಾಮಾನ್ಯವಾಗಿ ಉದ್ಭವಿಸುವ ಗಲಿಬಿಲಿಯ ಅವಧಿಗಳನ್ನು ಇವು ಸೂಚಿಸುತ್ತವೆ. ಸುತ್ತಲಿನ ರಾಷ್ಟ್ರಗಳವರು ಆ ರಾಷ್ಟ್ರದ ಮೇಲೆ ದಂಡೆತ್ತಿ ಹೋಗುವ ಸಂದರ್ಭವನ್ನು ಸುಸಂದರ್ಭ ಎಂದು ಕೊಂಡರು[32]. ಕೀರ್ತನೆಗಾರನು ಅದನ್ನು "ದೇವರಿಗೆ ವಿರುದ್ಧವಾದುದ"[33] ಮತ್ತು ಆತನ ಕ್ರಿಸ್ತನಿಗೆ (ಅಭಿಷೇಕಿಸಲ್ಪಟ್ಟವನಿಗೆ) ವಿರುದ್ಧವಾದುದು ಎಂದು ಸಾರುತ್ತಾನೆ, ಹಾಗೂ ನಿರರ್ಥಕವಾದುದು ಎಂದೂ ಘೋಷಿಸುತ್ತಾನೆ. ಮೂಲತಹವಾಗಿ [ಅಭಿಷೇಕಿಸಲ್ಪಟ್ಟನು] ಎಂಬುದು ಇಸ್ರಾಯೇಲಿನ ಅರಸನನ್ನು ಸೂಚಿಸುವುದಾಗಿದೆ (1 ಸಮುವೇಲ 26:9), ಆದರೆ ಯಾವ ಮನುಷ್ಯ ಅರಸನೂ ಕೀರ್ತನೆಗಾರನು ಹೇಳಿದ "ಅಭಿಶಕ್ತನೊಬ್ಬನ" ಬಗೆಗೆ ಹೇಳಿದ ಯಾವ ಮಾತುಗಳನ್ನು ಸಂಪೂರ್ಣವಾಗಿಸಿಲ್ಲ. ಹೀಗೆ ಯೊಹೂದಿಗಳು ಕೀರ್ತನೆ 2ನ್ನು ಅರ್ಥೈಸಿಕೊಂಡು ಕಡೆಗೆ ಅದನ್ನು ಬರಲಿರುವ ಮೆಸ್ಸೀಯನಿಗಾಗಿ ಸೂಚಿಸಿದರು.

ಕೀರ್ತನೆ 2 ನಿಖರವಾಗಿ ಯೇಸುವಿಗೆ ಏನು ಸಂಭವಿಸುತ್ತದೋ ಅದರ ಛಾಯೆಯೆಂತಿದ್ದು ಆ ಮಾತಿಗನುಸಾರವಾಗಿಯೇ: "ಈ ಪಟ್ಟಣದಲ್ಲಿ (ಯೆರೂಸಲೇಮಿನಲ್ಲಿ) ಹೆರೋದ್ಯನೂ ಪೊಂತ್ಯಪಿಲಾತನೂ ನೀನು ಅಭಿಷೇಕಿಸಿದ[34] ನಿನ್ನ ಪವಿತ್ರ ಸೇವಕನಾದ,[35] ಯೇಸುವಿಗೆ ವಿರುದ್ಧವಾಗಿ ಅನ್ಯಜನರು ಮತ್ತು ಇಸ್ರಾಯೇಲ ಜನರು ಸಹಿತವಾಗಿ ವಿರುದ್ಧವಾಗಿ ಕೂಡಿಕೊಂಡು" (ವಚನ 27) ಎಂದಿದೆ. ನಾಲ್ಕು ಗುಂಪುಗಳು ಅಭಿಷೇಕಿಸಲ್ಪಟ್ಟವನ ವಿರುದ್ಧ ಕೂಡಿಕೊಂಡವು ಎಂದು ದಾವೀದನು ಹೇಳುತ್ತಾನೆ; ಅರಸರು ಅಧಿಕಾರಿಗಳು, ಅನ್ಯಜನಾಂಗಗಳು, ಮತ್ತು "ಜನರು" ಈ ಎಲ್ಲ ನಾಲ್ಕೂ ಗುಂಪುಗಳು ತಮ್ಮ ಬಲವನ್ನು ಯೇಸುವಿನ ವಿರುದ್ಧ ಸೇರಿಸತೊಡಗಿದರು ಅವರುಗಳು: ಅರಸನಾದ ಹೆರೋದನು, ಅಧಿಕಾರಿಯಾದ ಪಿಲಾತ, ಅನ್ಯಜನಾಂಗದ ಸೈನಿಕರು (ರೋಮನ್ನರು) ಮತ್ತು ಇಸ್ರಾಯೇಲಿನ ಜನರು![36]

## ದೇವರ ಮೇಲೆ ಆತುಕೊಳ್ಳುವುದು (4:28-30)

ಪ್ರಾರ್ಥನೆಯ ಕೊನೆಯ ಭಾಗದಲ್ಲಿ, ಅಪೊಸ್ತಲರು ದೇವರ ಮೇಲೆ ಆತುಕೊಳ್ಳುವಿಕೆಯನ್ನು ಒತ್ತಿಹೇಳುತ್ತಾರೆ. ದೇವರು ತನ್ನ ಸಂಪೂರ್ಣವಾದ ನಿಯಂತ್ರಣದಲ್ಲಿದ್ದಾನೆ ಎಂದು ಅವರು ನಂಬುವವರಾಗಿದ್ದರು. ವಚನ 28 ಸೂಚಿಸುವುದೇನೆಂದರೆ ನಾಲ್ಕು ಗುಂಪು ಒಟ್ಟಾಗಿ ಸೇರಿ ಬಂದು "ನಿನ್ನ ಕೈಯೂ ಮತ್ತು *ನಿನ್ನ* ಸಂಕಲ್ಪವೂ ನೇಮಿಸಿದ್ದನ್ನೇ ನಡಿಸಿದವು" (ಒತ್ತಿ ಹೇಳಿದ್ದು ನನ್ನದು). NIVಯಲ್ಲಿ "ಮೊದಲೇ ನಿಶ್ಚಿತವಾದ *ನಿನ್ನ* ಶಕ್ತಿ ಮತ್ತು ಚಿತ್ತದ ಪ್ರಕಾರವಾಗಿರುವದನ್ನು ಅವರು ಮಾಡಿದರು ಎಂದಿದೆ." ಪ್ರತಿಯೊಂದೂ ಘಟನೆಯು ದೇವರ ಯೋಜನೆ ಮತ್ತು ಉದ್ದೇಶದ ಭಾಗವಾಗಿವೆ ("ಅವರು ಮಾಡಿದಂತೆ ವರ್ತಿಸಲು ದೇವರು ಅವರನ್ನು ಒತ್ತಾಯಿಸಲಿಲ್ಲ, ಆದರೆ ಅವರನ್ನು ಬಳಸಲು ಬಯಸುತ್ತಾನೆ ಮತ್ತು ಅವರ ಮುಕ್ತವಾದ

ಆಯ್ಕೆಯು ಆತನ ರಕ್ಷಣಾ ಉದ್ದೇಶವನ್ನು ಸಾಧಿಸುವಂತೆ ವರ್ತಿಸುತ್ತದೆ."[37]) ಇನ್ನೊಂದು ಮಾತಿನಲ್ಲಿ, ಯೆರೂಸಲೇಮಿನಲ್ಲಿರುವ ಶಕ್ತಿಯುತ ನಾಯಕರುಗಳಿಂದ ಪ್ರಾರಂಭವಾದ ಹಿಂಸೆಯು ದೇವರ ಪರಿಸ್ಥಿತಿಯ ಮೇಲಿನ ನಿಯಂತ್ರಣವನ್ನು ಕಳೆದುಕೊಂಡಿದ್ದಾನೆ ಎಂದು ಸಾಧಿಸಲಾಗದು, ಇನ್ನೊಂದು ಮಾತಿನಲ್ಲಿ ಹೇಳುವಾದದರೆ ಆತನು ಎಲ್ಲವನ್ನೂ ತನ್ನ ನಿಯಂತ್ರಣದಲ್ಲಿ ಇಟ್ಟು ಕೊಂಡಿದ್ದಾನೆ ಎಂಬುದನ್ನು ಸಾಧಿಸುತ್ತದೆ![38] ಸೈತಾನನು ನಮಗೆ ಕಠಿಣವಾದ ಸಮಯವನ್ನು ಎದುರುಮಾಡಿದಾಗ, ನಮ್ಮ ಜೀವನದಲ್ಲಿನ ಪ್ರತಿಯೊಂದು ಸಂಗತಿಯು ಅಂಕೆ ಮೀರಿಹೋಗುತ್ತದೆ ಎಂದು ನಮಗೆ ಅನ್ನಿಸುತ್ತಿರುವಾಗ ಎಲ್ಲವನ್ನೂ ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿರುವಾತನನ್ನು, ಕೆಟ್ಟತನವನ್ನು ಒಳ್ಳೆಯದಕ್ಕೆ ಪರಿವರ್ತಿಸುವಾತನನ್ನು (ರೋಮಾಪುರ 8:28) ನಾವು ಆರಾಧಿಸುವವರಾಗಿದ್ದೇವೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳುವದು ಮಹತ್ವವಾಗಿದೆ!

ವಚನ 29 ಮತ್ತು 30ರಲ್ಲಿ, ಅಪೊಸ್ತಲರ ಭಿನ್ನಹವು ಇಲ್ಲಿದೆ, ನಾನು ಪ್ರಾರ್ಥನಾ ವಿಭಾಗಕ್ಕೆ ಬಂದಾಗ ನಾನು ಒಂದು ಕ್ಷಣ ನಿಲ್ಲುತ್ತೇನೆ ಮತ್ತು ಚಿಂತನೆ ಮಾಡುತ್ತೇನೆ: "ದೇವರು ಸರ್ವಶಕ್ತ ಮತ್ತು ಸಂಪೂರ್ಣವಾಗಿ ಎಲ್ಲವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡವನು ಎಂದು ತಿಳಿದಿದ್ದಾಗ್ಯೂ ಒಂದು ವೇಳೆ ನಾನೇ ಈ ಜನರಾಗಿದ್ದಾದರೆ[39] ನಾನು ಏನು ಕೇಳಿಕೊಳ್ಳುತ್ತಿದ್ದೆನು?" ಯಾರು ಕ್ರಿಸ್ತನ ವೈರಿಗಳಾಗಿದ್ದಾರೋ ಅವರನ್ನು ಶಿಕ್ಷಿಸು ಎಂದು ನಾನು ಕೇಳಿಕೊಳ್ಳುತ್ತಿದ್ದೇನೇನೋ? ಈ ಹಿಂಸೆಯನ್ನು ನಿಲ್ಲಿಸು ಎಂದೂ ಆತನಲ್ಲಿ ಕೇಳಿಕೊಳ್ಳುತ್ತಿದ್ದೇನೇನೋ? ಕೊನೇ ಪಕ್ಷ, ಒಂದು ವೇಳೆ ಹಿಂಸೆ ಮುಂದುವರೆದಿದ್ದರೆ, ಅವರಿಂದ ರಕ್ಷಿಸು ಎಂದಾದರು ಕೇಳಿಕೊಳ್ಳಬಹುದು. ಆದರೆ ಅಪೊಸ್ತಲರು ಆ ಸಂಗತಿಗಳಲ್ಲಿ ಒಂದನ್ನಾದರೂ ವಿನಂತಿ ಮಾಡಲಿಲ್ಲ. ಬದಲಾಗಿ ಅವರು:

> ಕರ್ತನೇ, ಈಗ ನೀನು ಅವರ ಬೆದರಿಸುವಿಕೆಗಳನ್ನು[40] ನೋಡಿ ನಿನ್ನ ಪವಿತ್ರ ಸೇವಕನಾದ[41] ಯೇಸುವಿನ ಹೆಸರಿನ ಮೂಲಕವಾಗಿ ರೋಗಪರಿಹಾರವೂ ಸೂಚಕಕಾರ್ಯಗಳೂ ಅದ್ಭುತಕಾರ್ಯಗಳೂ ಉಂಟಾಗುವಂತೆ ನಿನ್ನ ಕೈಯನ್ನು ಚಾಚುತ್ತಿರುವಲ್ಲಿ ನಿನ್ನ ದಾಸರು ನಿನ್ನ ವಾಕ್ಯವನ್ನು ಧೈರ್ಯದಿಂದ ನಿಖರವಾಗಿ [KJV NIV ಅಥವಾ ಧೈರ್ಯದಿಂದ] ಹೇಳುವ ಹಾಗೆ ಅನುಗ್ರಹಿಸು ಅಂದರು (ವಚನಗಳು 29, 30).

ಮಂಡಳಿಯ ಬಗ್ಗೆ ಅವರು ಸರಳವಾಗಿ "ಕರ್ತನೇ, ಈಗ ಅವರ ಬೆದರಿಸುವಿಕೆಯನ್ನು ನೋಡಿ" ಎಂದು ಕೇಳಿದರು. ಇನ್ನೊಂದು ಮಾತಿನಲ್ಲಿ "ಕರ್ತನೇ, ನಾವು ಈ ಸಂಗತಿಯನ್ನು ನಿನ್ನ ಕೈಯಲ್ಲಿ ಬಿಡುತ್ತೇವೆ. ಈ ಜನರು ಏನು ಮಾಡಿದ್ದಾರೆ ಎಂಬುದನ್ನು ಗಮನಿಸು - ಮತ್ತು ಅದನ್ನು ನಿನ್ನ ಚಿತ್ತದಂತೆ ನೋಡಿಕೋ" ಎಂದಿರಬಹುದು.

ಸೈತಾನನು ನಮಗೆ ಕಠಿಣ ಸಮಯವನ್ನು ಎದುರುಮಾಡಿದಾಗ, ದ್ವೇಷಸಾಧಿಸುವ ಅಥವಾ ಸೇಡಿನ ಆತ್ಮಗಳನ್ನು ಇಟ್ಟುಕೊಳ್ಳದಂತೆ ನಮ್ಮನ್ನು ನಾವು ಕಾಪಾಡಿಕೊಳ್ಳುಂತೆ ಕಾದುಕೊಳ್ಳಲೇಬೇಕು. ಪೌಲನು "ಎಲ್ಲಾ ದ್ವೇಷ, ಕ್ರೋಧ, ಕೋಪ, ಕಲಹ ದೂಷಣೆ ಇವುಗಳನ್ನೂ ಸಕಲ ವಿಧವಾದ ದುಷ್ಟತನವನ್ನೂ ನಿಮ್ಮಿಂದ ದೂರಮಾಡಿರಿ ಎಂದು ಬರೆಯುತ್ತಾನೆ" (ಎಫೆಸ 4:31). ತಿರುಗಿ ಆತನು, ಎಂದು ಬರದದೆ:

> ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ ಶಿಕ್ಷಿಸುವುದನ್ನು ದೇವರಿಗೆ ಬಿಡಿರಿ. ಯಾಕೆಂದರೆ ಮುಯ್ಯಿಗೆ ಮುಯ್ಯಿ ತೀರಿಸುವುದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆಂಬುದಾಗಿ ಬರೆದದೆ. ಹಾಗಾದರೆ, ನಿನ್ನ ವೈರಿ ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು; ಬಾಯಾರಿದ್ದರೆ ಕುಡಿಯುವುದಕ್ಕೆ ಕೊಡು,

ಹೀಗೆ ಮಾಡುವದರಿಂದ ಅವನ ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಟ್ಟಂತಾಗುವದು, ಕೆಟ್ಟತನಕ್ಕೆ ಸೋತುಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು (ರೋಮಾಪುರ 12:19-21).

ನೀನು ಅತಿಯಾಗಿ ನೋವುಂಡಿದ್ದೇ ಆದರೆ ದೇವರಿಗೆ "ನಿನಗೆ ಏನು ಸಂಭವಿಸಿತೆಂದು ಗಮನಿಸಲು ಕೇಳಿಕೋ." ನಂತರ ಎಲ್ಲಾ ಸಂಗತಿಗಳನ್ನು ಆತನ ಕೈಯಲ್ಲಿ ಬಿಡು, ಮತ್ತು ನಿನ್ನ ಜೀವನದಲ್ಲಿ ಮುನ್ನಡೆ!

ಅಪೊಸ್ತಲರು ಮಂಡಳಿಯು ತಮಗೆ ಏನು ಮಾಡಿತೆಂಬುದರ ಬಗೆಗೆ ಚಿಂತಿಸಲಿಲ್ಲ - ಅಥವಾ ಮಂಡಳಿಯು ಏನುಮಾಡಬಹುದೆಂದು ಅಲ್ಲ. ಆದರೆ ಈ ಸವಾಲಿಗೆ ತಾವು ಸರಿಯಾಗಿ ಸ್ಪಂದಿಸಲು ಸಾಧ್ಯವೇ ಎಂಬುದಾಗಿ ಅವರು ಚಿಂತಿಸಿದ್ದರು. ಸಂಕಷ್ಟದಿಂದ ಪಾರಾಗಲು ಅವರು ಕೇಳಿಕೊಳ್ಳಲಿಲ್ಲ. ಬದಲಾಗಿ ಸೇವೆಗೆ ತಮ್ಮನ್ನು ಸಶಕ್ತರನ್ನಾಗಿ ಮಾಡುವಂತೆ ಕೇಳಿಕೊಂಡರು. ಎಲ್ಲದಕ್ಕಿಂತ ಹೆಚ್ಚಾಗಿ ಅವರು ಆತನ ವಾಕ್ಯವನ್ನು ಧೈರ್ಯಯುಕ್ತವಾಗಿ ಸಾರಲು ಮತ್ತು ಶಕ್ತಿಯುತವಾಗಿ ಆತನ ಚಿತ್ತವನ್ನು ನೆರವೇರಿಸಲು ಬಯಸಿದರು!

## ದೇವರು ನಿಮಗೆ ಅವಶ್ಯವಿರುವ ಬಲವನ್ನು ನಿಮಗೆ ಕೊಡುವನು ಎಂಬುದನ್ನು ನಂಬು (4:31)

ಅವರು ಕಲ್ಪಿಸಿಕೊಂಡಂತಹ ಉತ್ತರವನ್ನು ಅವರು ಬೇಗನೇ ಪಡೆದುಕೊಂಡರು! "ಹೀಗೇ ಪ್ರಾರ್ಥನೆ ಮಾಡಿದ ಮೇಲೆ ಅವರು ಕೂಡಿದ್ದ ಸ್ಥಳವು[42] ನಡುಗಿತು. ಅವರೆಲ್ಲರೂ ಪರಿಶುದ್ಧಾತ್ಮಭರಿತ ರಾಗಿ ದೇವರ ವಾಕ್ಯವನ್ನು ಧೈರ್ಯದಿಂದ ಹೇಳುವವರಾದರು" (ವಚನ 31). ಇದು ಇನ್ನೊಂದು "ಪಂಚಾಶತ್ತಮ ದಿನವಲ್ಲ,"[43] ಬದಲಾಗಿ ದೇವರು ತಾನೇ ಅವರೊಂದಿಗಿದ್ದಾನೆ ಎಂಬುದನ್ನು ಸ್ಪಷ್ಟವಾದ ಮಾರ್ಗದಲ್ಲಿ ತೋರಿಸಿಕೊಂಡನು - ನಂತರ ಸೆರೆಮನೆಯನ್ನೇ ನಡಗಿಸುವುದರ ಮೂಲಕ ತನ್ನನ್ನು ತೋರ್ಪಡಿಸಿಕೊಂಡನು (ಅಪೊಸ್ತಲರ ಕೃತ್ಯಗಳು 16). "ಪರಿಶುದ್ಧಾ ತ್ಮನಿಂತ ತುಂಬಿರುವುದು" ಬಹುಶಃ ಇದರ ಅರ್ಥ ವಚನ 8ರಲ್ಲಿ[44] ಸೂಚಿಸಿರುವಂತದ್ದೇ ಆಗಿದೆ. ವಚನ 8ರಲ್ಲಿ "ಪೇತ್ರನು ಪರಿಶುದ್ಧಾತ್ಮಭರಿತಾನಾಗಿ" ಮಂಡಳಿಯೊಂದಿಗೆ ಮಾತನಾಡಿದನು. ಈಗ "ಅವರು [ಅಪೊಸ್ತಲರು] ಎಲ್ಲರೂ ಪರಿಶುದ್ಧಾತ್ಮಭರಿತಾರಾಗಿದ್ದರು [ಪೇತ್ರನ ಹಾಗೆ], ಮತ್ತು ಧೈರ್ಯದಿಂದ ದೇವವಾಕ್ಯವನ್ನು ಮಾತನಾಡಲಾರಂಭಿಸಿದರು" [ಪೇತ್ರನೂ ಕೂಡ, ವಚನ 13]. ಮಂಡಳಿಯು ಆ ಇಬ್ಬರು ಮನುಷ್ಯರಿಗೆ ಯೇಸುವಿನ ಹೆಸರಿನಲ್ಲಿ ಮಾತನಾಡಬಾರದೆಂದು ಎಚ್ಚರಿಸಿತು. ಇಬ್ಬರು ಮನುಷ್ಯರನ್ನು ಸುಮ್ಮನಿರಿಸುವ ಬದಲಾಗಿ ಅವರ ಬೆದರಿಕೆಯ ಪರಿಣಾಮದಿಂದ ಹನ್ನೆರಡು ಜನರು ಧೈರ್ಯದಿಂದ ಆ ಹೆಸರಿನಲ್ಲಿ ಸ್ವಸ್ಥಮಾಡುವಲ್ಲಿಯೂ ಮತ್ತು ಬೋಧಿಸುವಲ್ಲಿಯೂ ಪರಿಣಾಮವನ್ನು ತಂದಿತು! "... ಕರ್ತನಾದ ಯೇಸು ಜೀವಂತನಾಗಿ ಎದ್ದುಬಂದನೆಂದು ಅಪೊಸ್ತಲರು ಬಲವಾಗಿ ಸಾಕ್ಷಿ ಹೇಳುತ್ತಿದ್ದರು" (4:33); "ಇದಲ್ಲದೇ ಅಪೊಸ್ತಲರ ಕೈಯಿಂದ ಅನೇಕ ಸೂಚಕ ಕಾರ್ಯಗಳು ಜನರಲ್ಲಿ ನಡೆಯುತ್ತಾ ಇದ್ದವು" (5:12)!

ಯೇಸು ಅಪೊಸ್ತಲರಿಗಾಗಿ ಮಾಡಿದಂತಹ ಅದೇ ವಾಗ್ದಾನವನ್ನು ನಮಗೂ ಮಾಡಿಲ್ಲ. ದೇವರು ಭೌತಿಕವಾಗಿ ನಾವಿರುವ ಕಟ್ಟಡವನ್ನು ಅಲುಗಾಡಿಸುವುದಿಲ್ಲ ಅಥವಾ ನಾವು ಸ್ಫೂರ್ತಿದಾಯಕವಾಗಿ ಮಾತನಾಡುವುದಕ್ಕೆ ಸಮರ್ಥರನ್ನಾಗಿಸುವುದಿಲ್ಲ. ಇದರ ಅರ್ಥ ದೇವರು ನಮ್ಮನ್ನು ಶಕ್ತಿಹೀನರನ್ನಾಗಿ ಬಿಟ್ಟುಬಿಡುತ್ತಾನೆ ಎಂದಲ್ಲ. ಆತನು ನಮ್ಮೊಂದಿಗಿರು ತ್ತೇನೆ ಎಂದು ವಾಗ್ದಾನಮಾಡಿದ್ದಾನೆ (ಇಬ್ರಿಯ 13:5ಬಿ, 6). ಆತನು ತನ್ನ ಆತ್ಮನನ್ನು ನಮ್ಮ ಸಹಾಯಕ್ಕಾಗಿ ನಮಗೆ ಕೊಟ್ಟಿದ್ದಾನೆ (ಅಪೊಸ್ತಲರ ಕೃತ್ಯಗಳು 2:38). ಆತನು ನಮಗೆ "ನಮ್ಮಲ್ಲಿ ಕಾರ್ಯ ಮಾಡುವ ಶಕ್ತಿಯನ್ನು" ನಮಗೆ ಕೊಟ್ಟಿದ್ದಾನೆ (ಎಫೆಸ 3:20).

ಸಂಕಷ್ಟವು ನಮ್ಮ ಮಾರ್ಗದಲ್ಲಿ ಬರುವಾಗ "ಅದನ್ನು ತಪ್ಪಿಸಿಕೊಳ್ಳುವ ಮಾರ್ಗವನ್ನು" ನಮಗೆ ಕೊಡುವನು. ಹೀಗೆ ನಾವು ಅದನ್ನು ತಾಳಿಕೊಳ್ಳಬಹುದು (1 ಕೊರಿಂಥ 10:13). ಆತನು ಚರ್ಚಕಟ್ಟಡವನ್ನು ಈ ದಿನ ಅಲುಗಾಡಿಸಲಿಕ್ಕಿಲ್ಲ, ಆದರೆ ಆತನು ಸಭೆಯನ್ನು (ಜನರನ್ನು) ಅಲುಗಾಡಿಸಬಲ್ಲನು![45] ಹೀಗೆ ನಾವೂ ಸಹ, ದೇವರ ವಾಕ್ಯವನ್ನು ಧೈರ್ಯದಿಂದ ಮಾತನಾಡಬಹುದಾಗಿದೆ!

## ಮುಕ್ತಾಯ

ಸೈತಾನನು ಅಪೊಸ್ತಲರ ಬಾಯನ್ನು ಮುಚ್ಚಿಸಲು ಪಯತ್ನಿಸಿದನು, ಆದರೆ ಆತನು ವಿಫಲನಾದನು. ಸೈತಾನನು ಪ್ರತಿಯೊಂದೂ ಮಾರ್ಗದಲ್ಲಿ ಬಾಯಿ ಮುಚ್ಚಿಸಲು ಪ್ರಯತ್ನಿಸುತ್ತಲೇ ಇದ್ದಾನೆ. ಹೇಗೋ, ನಾವು ನಮ್ಮ ಅಧ್ಯಯನ ಭಾಗದಿಂದ ಸಿಕ್ಕುವ ಸೂಚನೆಯನ್ನು ಅನುಸರಿಸುವುದಾದರೆ ಮತ್ತು ದೇವರಿಗೆ ಹತ್ತಿರವಾಗಿ ಇರುವುದಾದರೆ ಸೈತಾನನು ನಮ್ಮ ವಿಷಯದಲ್ಲಿ ವಿಫಲನಾಗುತ್ತಾನೆ. "ದೇವರಿಗೆ ಒಳಗಾಗಿರಿ, ಸೈತಾನನ್ನು ಎದುರಿಸಿರಿ. ಆತನು ನಿಮ್ಮನ್ನು ಬಿಟ್ಟು ಓಡಿಹೋಗುವನು" (ಯಾಕೋಬ 4:7).

ಹೀಗೆ ಸೈತಾನನಾದರೂ ಅಷ್ಟು ಸರಳವಾಗಿ ಬಿಟ್ಟುಕೊಡಲಾರನು. ಅಧ್ಯಾಯ 5ರಲ್ಲಿ ಸೈತಾನನು ತಿರುಗಿ ಸಭೆಯನ್ನು ಒಳಗಿನಿಂದಾಗಲೀ ಹೊರಗಿನಿಂದಾಗಲೀ ನಾಶಮಾಡಲು ಪ್ರಯತ್ನಿಸುತ್ತಾನೆ ಎಂಬುದನ್ನು ನಾವು ನೋಡುತ್ತೇವೆ. ಹಾಗೆಯೇ, ಸೈತಾನನು ಸರಳವಾಗಿ ನಿನ್ನನ್ನು ಬಿಟ್ಟುಕೊಡಲಾರನು ಯಾಕೋಬ 4:7ರಲ್ಲಿ ತಿರುಗಿ ನೋಡಿರಿ "... ಸೈತಾನನನ್ನು ಎದುರಿಸಬೇಕಾದರೆ ನೀನು *ಮೊದಲು* ದೇವರಿಗೆ ಒಳಗಾಗಬೇಕು." ನಿಮ್ಮಷ್ಟಕ್ಕೆ ನೀವೇ ಸೈತಾನನ್ನು ಎದುರಿಸಲಾಗದು; ನಿಮಗೆ ದೇವರ ಸಹಾಯದ ಅವಶ್ಯಕತೆಯು ಇದೆ! ನಮ್ಮ ಜೀವತವನ್ನು ದೇವರಿಗೆ ಒಪ್ಪಿಸದೆ ಹೋಗಿದ್ದ ಆದರೆ ಈಗಲೇ ತಕ್ಷಣವೇ ಹಾಗೆ ಮಾಡಿರಿ!

ಟಿಪ್ಪಣಿಗಳು

[1]ಗ್ರೀಕದಲ್ಲಿ "ಸನ್ಹೆದ್ರೀನ್" ಎಂಬ ಪದವಿದೆ ಮತ್ತು NIVಯಲ್ಲಿ ಈ ರೀತಿಯಲ್ಲಿ ಭಾಷಾಂತರಿಸಲ್ಪಟ್ಟಿದೆ. ಈ ವಚನವು ಮಂಡಳಿಯ ಕೋಣೆಯನ್ನು ಸೂಚಿಸುವುದಾಗಿದೆ. [2]ಸಂಬಾಷಣಕಾರರು, ಲೂಕನು ಮುಚ್ಚಲ್ಪಟ್ಟ ಕೋಣೆಯಲ್ಲಿ ನಡೆದ ಸಂಭಾಷಣೆಯ ಬಗೆಗೆ ಹೇಗೆಕಂಡುಕೊಂಡನು ಎಂದು ಆಶ್ಚರ್ಯಪಡುತ್ತಾರೆ. ಕೆಲವರು ಸೂಚಿಸುವುದೇನಂದರೆ ಪೌಲ ಅಥವಾ ಗಮಲಿಯೇಲನು (ಪೌಲನ ಶಿಕ್ಷಕ) ಅಥವಾ ಇಬ್ಬರೂ ಅಲ್ಲಿ ಉಪಸ್ಥಿತರಿದ್ದರಬಹುದು ಮತ್ತು ಲೂಕನು ಪೌಲನಿಂದ ಏನು ಸಂಭವಿಸಿತೆಂದು ಕೇಳಿ ತಿಳಿದಿರಬಹುದು. ಇತರರು ಸೂಚಿಸುವುದೇನೆಂದರೆ ನಂತರ ಪರಿವರ್ತಿತರಾದ ಕೆಲ ಯಾಜಕರು (6:7) ಅಥವಾ ನಂತರ ಪರಿವರ್ತಿತರಾದ ಫರಿಸಾಯರು (15:5) ಬಹುಶಃ ಅಲ್ಲಿ ಉಪಸ್ಥಿತರಿದ್ದರು. ಎಲ್ಲ ಸಂಕಷ್ಟಗಳು ತೆಗೆದುಹಾಕಲ್ಪಟ್ಟಾಗ, ಹೇಗೋ, ಲೂಕನು ಮನದಲ್ಲಿ ಇದು ಉಳಿದಿತ್ತು, ಲೂಕನು ಪರಿಶುದ್ಧಾತ್ಮನಿಂದ ಮಾರ್ಗದರ್ಶನವನ್ನು ಪಡೆದನು. ಮುಚ್ಚಿದ ಬಾಗಿಲ ಹಿಂದೆ ಏನು ನಡೆಯುತ್ತದೆ ಎಂಬುದನ್ನು ದೇವರು ತಿಳಿದಿದ್ದಾನೆ. [3]ಭಿಕ್ಷುಕನನ್ನು ವಾಸಿಮಾಡಿದ ಉದಾಹರಣೆಯು ಈ ಮೂರು ಗುಣಲಕ್ಷಣಗಳನ್ನು ದೃಷ್ಟಾಂತೀಕರಿಸುತ್ತದೆ. ತಕ್ಷಣ 3:7; ಸಂಪೂರ್ಣವಾಗಿ 4:10; ಮನವರಿಕೆ ಮಾಡುವುದು 4:16. [4]J. W. McGarvey, *New Commentary on Acts of Apostles*, vol. 1 (Delight, Ark.: Gospel Light Publishing Co., n.d.), 73. [5]ಕಪಟಿಗಳಾದ ಜನರು ಇತರಲ್ಲಿ ಕಪಟತನವನ್ನೇ ಎದುರುನೋಡುವವರಾಗಿದ್ದಾರೆ. [6]ಸೈತಾನನಿಗೆ ಒಂದು ಇಂಚನ್ನು ಕೊಟಬೇಡ ಇದರ ಅರ್ಥ ಸ್ವಲ್ಪವಾದರೂ ಕೂಡ ಸೈತಾನನೊಡನೆ ಹೆಜ್ಜೆಹಾಕದಿರು ಎಂಬುದೇ! ಎಂದಾಗಿದೆ ಮಾನದಂಡದ ಪದ್ಧತಿಯು ಪ್ರಚಲಿತ ಇರುವಲ್ಲಿ ನೀವು ಇರುವುದಾದರೆ ಅದನ್ನು ನಿಮ್ಮ ಪ್ರಾದೇಶಿಕ ಪರಿಮಾಣ ಪದ್ಧತಿಯಲ್ಲಿ ಬದಲಾಂಯಿಸಿಕೊಳ್ಳಿರಿ. [7]ಸಮಯವು ಹೋದಂತೆ ಸಭೆಯು ಸ್ವಾರ್ಥದಲ್ಲಿ ಸೇವಾಪರ ಕಾರ್ಯದಲ್ಲಿ ತೊಡಗಿಸಿಕೊಂಡಂತೆ ಸುವಾರ್ತಾ ಕಾರ್ಯಗಳು ಕಡಿಮೆಯಾಗುತ್ತಾ ಬಂದವು. ಹೀಗಿರುವಾಗ ಇದು ಸೈತಾನನಿಗೆ ತನ್ನ

ಉದ್ದೇಶಗಳನ್ನು ನೆರವೇರಿಸಲು ಸಹಾಕವಾಯಿತು. ಅನೇಕ ಸಭೆಗಳ ಚಟುವಟಿಕೆಗಳು ಆತನನ್ನು ಎಂದಿಗೂ ಗಲಿಬಿಲಿ ಮಾಡುವುದಿಲ್ಲ. [8]ಬಲಹೀನವಾದ ಚಿಕ್ಕಮಗುವನ್ನು ನೀವು ದೃಷ್ಟಾಂತವಾಗಿ ಬಳಸಬಹುದು. ಈ ಘಟನೆಗಳು ಆದಿಸಭೆಯ ಆರಂಭದಲ್ಲಿ ಸಂಭವಿಸದವು. [9]ನಾನು ತರಗತಿಯಲ್ಲಿ "ಆ ಶಾಸನವು ಜಾರಿಗೆ ಬಂದದ್ದಾದರೆ ಏನಾಗುಲೆತ್ತು?" ಎಂದು ಕೇಳಿ ದೆನು, ಆಗ ಒಬ್ಬನು "ಬಹುಶ ಅಸಂಗತಿಗಳ ಕುರಿತು ಅಭ್ಯಸಿಸಲು ನಾವಿಲ್ಲ ಈ ರಾತ್ರಿ ಕೂಡಿಬರುತ್ತಿರಲಿಲ್ಲ!" ಎಂದು ಉತ್ತರಿಸಿದನು. [10]ಅವರು ಯಾವಾಗಲೂ ಯೇಸುವನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಬೇಕೆಂದುಕೊಂಡಾಗಲೆಲ್ಲ ಯೇಸುವೇ ಅವರನ್ನು ಧರ್ಮಸಂಕಟದಲ್ಲಿ ಸಿಕ್ಕಿಸುತ್ತಿದ್ದನು. ಇದಕ್ಕೆ ಸಮಾನವಾದ ಪರಿಸ್ಥಿತಿಯು ಕ್ರಿಸ್ತನ ಜೀವಿತ ದಲ್ಲಿ ನಡೆಯಿತು. ನೋಡಿ, ಮತ್ತಾಯ 21:24-27.

[11]ಈ ವಿಚಾರವು ರಿಚರ್ಡ್ಸ್ ರೋಗರ್ಸ್ ರ "ಮೊದಲವಿರೊಧ" ಎಂಬುದರಿಂದ ತೆಗೆದುಕೊಳ್ಳಲ್ಪಟ್ಟಿದ್ದು ಈ ಪ್ರಸಂಗವು Sermon preached at the Sunset church of Christ, Lubbock, Texas, n.d. [12]Ibid. (ಅದೇ ಮೂಲ). [13]ಕೆಲ ಲೇಖಕರು, ಮೊದಲ ತಪ್ಪಿಗೆ ಹಾಗೇ ಬೆದರಿಸಿ ಬಿಟ್ಟುಬಿಡುವದು ಮಂಡಳಿಯ ನೀತಿಯನ್ನು ನಿರೂಪಿಸುತ್ತದೆ ಎಂದು ಬರೆಯುತ್ತಾರೆ. ವಾಕ್ಯವೂ ಇದನ್ನು ಸ್ಪಷ್ಟಪಡಿಸುತ್ತದೆ. ಹೇಗೋ ಮಂಡಳಿಯು ಅಪೊಸ್ತಲರನ್ನು ಶಿಕ್ಷಿಸಲು ಬಯಲಿತ್ತು ಮತ್ತು ಅವರಲ್ಲಿ ಅವರು ಹಾಗೆ ಮಾಡಿದ್ದಕ್ಕಾಗಿ ಕೊಂಚಾವಾ ದರೂ ಪುರಾವೆಗಳು ಇದ್ದುದ್ದಾರೆ ಅವರಿಗೆ ಎಂತಹ ಶಿಕ್ಷೆಯನ್ನು ಕೊಡಲೂ ಅವರು ಹಿಂಜರೆ ಯುತ್ತಿರಲಿಲ್ಲ. [14]C. H. Rieu ಅಪೊಸ್ತಲರ ಕೃತ್ಯದ ಭಾಷಾಂತರದ *ಪುಸ್ತಕದ ಟಿಪ್ಪಣಿಯಲ್ಲಿ* ಅವರು "ಅವರನ್ನು ಶಿಕ್ಷಿಸಲು ಅವರಲ್ಲಿ ಏನೂ ಸಿಕ್ಕಲಿಲ್ಲ" ಎಂದಿದ್ದಾರೆ. (ಒತ್ತಿ ಹೇಳಿದ್ದು ನನ್ನದು.) [15]ಅವರು ಪೇತ್ರ ಯೋಹಾನರಿಗೆ ಭಯಹುಟ್ಟಿಸಲು ಪ್ರಯತ್ನಿಸಿದರು, ಆದರೆ ಅವರು ವಿಫಲ ರಾ ದರು. ಬದಲಾಗಿ ಅವರು ತಮ್ಮಲ್ಲಿ ತಾವೇ ಜನರಿಂದಾಗಿ ಭಯಪಟ್ಟರು. [16]ಆ ಮನುಷ್ಯನ ವಯಸ್ಸನ್ನು ಒತ್ತಿಹೇಳಿದ್ದಕ್ಕೆ ಕಾರಣ (1) ಆತನೊಬ್ಬ ಭಿಕ್ಷುಕನಾಗಿದ್ದನು ಬಹುದಿನಗಳಿಂದ ಜನರು ಆತನನ್ನು ತಿಳಿದಿದ್ದರು. (2) ಆತನು ವಯಸ್ಕನಾಗಿದ್ದನು. (3) ಸಂಶಯಕ್ಕೂ ಮೀರಿ ಅದ್ಭುತವು ನಡದಿದೆ ಎಂದು ಇದು ಸ್ಥಾಪಿಸಿತು. [17]ಅಪೊಸ್ತಲರ ಶಕ್ತಿಯಿಂದ ಮಂಡಳಿಯು ಸ್ವಲ್ಪ ವಿಚಲಿತವಾಗಿರಲು ಬಹುದು. [18]ಇವೆ ಲ್ಲವುಗಳೂ ತಪ್ಪಲ್ಲ ಅವರವರ ದೃಷ್ಟಿಕೋನದಲ್ಲಿ ಸರಿಯಾಗಿವೆ. [19]RSVಯಲ್ಲಿ "ಅವರ ಸ್ನೇಹಿತರು" ಎಂದಿದೆ. [20]ಶಾಸ್ತ್ರವು ಹೇಳುವುದೇನೆಂದರೆ "ಅವರು ಸ್ವರಗಳನ್ನು ಎತ್ತಿದರು" ಎಂಬುದು ಪದ್ಧತಿ ಗನುಸಾರ ವಾಗಿ ಇತ್ತು. ಒಬ್ಬ ವ್ಯಕ್ತಿಯು ಎಲ್ಲರ ಭಾವನೆಗೆ ಧ್ವನಿಕೊಡುವದು, ಇತರರು "ಆಮೆನ್" ನೊಡನೆ ಧ್ವನಿಕೂಡಿಸುವುದಾಗಿತ್ತು.

[21]"ಒಂದೇ ಸ್ವರದಲ್ಲಿ" ಎಂದು ಡರುನ್ ಬಾರಿ ಅಪೊಸ್ತಲರ ಕೃತ್ಯದಲ್ಲಿ ಸಿಕ್ಕುತ್ತದೆ. ಇದು ಆದಿ ಸಭೆಯ ಯಶಸ್ಸಿನ ರಹಸ್ಯವಾಗಿತ್ತು. [22]Warren W. Wiersbe, *The Bible Exposition Commentary*, vol. 1 (Wheaton, Ill.: Victor Books, 1989), 416. [23]ಪ್ರಾರ್ಥನೆಯು ಪ್ರತಿಕ್ರಿಯೆ ಆಗಿರಬೇಕು ಹೊರತಾಗಿ ಸಂಪ್ರಾದಾಯವಾಗಿರಬಾರದು. ನಾವೂ ಸಹ ಒಂದೇ ಪದಸಮೂಹವನ್ನು ಪದೇಪದೇ ಹೇಳದಂತೆ ಎಚ್ಚರವಹಿಸಬೇಕು. ಸಂದರ್ಭಕ್ಕನುಸಾರ ವಾಗಿ ನಿಮ್ಮ ಪ್ರಾರ್ಥನೆಯನ್ನು ಸಮಯೋಚಿತವಾಗಿಸಿಕೊಳ್ಳಿರಿ. [24]ಎಲ್ಲರೂ ಎಂಬ ಪದವು ಮನುಷ್ಯರನ್ನು ಒಳಗೊಂಡಿರುತ್ತದೆ. ಮನುಷ್ಯನು ದೇವರಿಂದ ಸೃಷ್ಟಿಸಲ್ಪಟ್ಟನು; ಮನುಷ್ಯನು ನೈಸರ್ಗಿಕ ಪ್ರಕ್ರಿಯೆಯಿಂದ ಮಾನವನು ಉತ್ಪತ್ತಿಯಾಗಲಿಲ್ಲ. [25]ಆಗಿನಂತೆಯೇ ಈಗಲೂ "ನಿರಂಕುಷ ಪ್ರಭು" ಎಂಬ ಪದವು ಸದಾ ಕೆಟ್ಟತನದ ಜೊತೆಯಲ್ಲಿ ಥಳಕುಹಾಕಿಕೊಂಡಿದೆ. ಮತ್ತು ಹೀಗೆ ಕ್ವಚಿತ್ತವಾಗಿ ದೇವರ ವಿಷಯದಲ್ಲಿ ಉಪಯೋಗಿ ಸಲ್ಪಡುತ್ತಿತ್ತು.ಈ ನಿರ್ಧಿಷ್ಟ ವಿಚಾರದಲ್ಲಿ ಹಾಗೂ ಅಸಾಮಾನ್ಯವಾದ ಬಲಯುತವಾದ ಈ ಪದವು ಬಹು ಯೋಗ್ಯವಾ ದದ್ದು ಆಗಿದೆ. [26]NIV, RSV ಮುಂತಾದವು. ಇತರ ಭಾಷಾಂತರಕಾರರು "ಗುರು" ಎಂಬ ಪದಸಮೂಹವನ್ನು ಬಳಸಿದ್ದು ಇದು (Goodspeed) ಎಂದಿದ್ದು, ಎಲ್ಲರನ್ನೂ ಆಳುವವ (Knox) ಅಥವಾ ಸರ್ವಶಕ್ತ ದೇವರು (Norlie) ಎಂದಿದೆ. [27]ಪ್ರಾರ್ಥನೆಯನ್ನು ಮಾಡುವಾಗ ವಾಕ್ಯಗಳನ್ನು ಬಳಸುವ ಒಂದು ಸಂಪ್ರದಾಯವಿದೆ. ಅದನ್ನು ಅತಿಯಾಗಿ ಮಾಡಕೂಡದು. ಪ್ರಾರ್ಥನೆಯು ಪ್ರಸಂಗದ ಅವಧಿಯಾಗಬಾರದು. [28]ಸ್ಪೂರ್ತಿಗೆ ಇನ್ನೊಂದು ಮಹತ್ವದ ಆಧಾರವು ಇದೆ. ಅದು ಕೀರ್ತನೆ 2ನ್ನು ಯಾರು ಬರೆದರು ಎಂಬುದನ್ನು ನಮಗೆ ಹೇಳುತ್ತದೆ ಎಂಬುದನ್ನು ಗಮನಿಸು. [29]"ಕೋಪಪ್ರೇಕ" ಎಂಬಪದವು ಹುಚ್ಚುಕುದುರೆಯ ಕೆಟ್ಟತನಕ್ಕೆ ಬಳಸಲಾಗಿದ್ದು ಪ್ರತಿರೋಧದ ನಂತರ ಕೊನೆಗೆ ಅದು ಶಿಸ್ತಿನ ಲಗಾಮಿಗೆ ಒಪ್ಪಿಸಿಕೊಳ್ಳುವಂತದ್ದಾಗಿದೆ ಎಂದು ಸೂಚಿಸುವುದಾಗಿದೆ. [30]ಅನೇಕ ಭಾಷ್ಯಕಾರರು 25ನೆಯ ವಚನದ ಪದಗಳು ಗಲಿಬಿಲಿಗೊಳಿಸುವಂತದ್ದೆಂದು ಗಮನಿಸಿದ್ದಾರೆ ಆದರೆ ಅದರ ಅರ್ಥವು ಸ್ಪಷ್ಟವಾಗಿಯೇ ಇದೆ.

[31]ಇಂತಹ ಕೀರ್ತನೆಗಳು "ರಾಜನ ಕೀರ್ತನೆಗಳು" ಎಂಬ ಪದನಾಮದಡಿಯಲ್ಲಿ ಸಂಬೋಧಿ ಸಲಾಗಿದೆ. ಇಸ್ರಾಯೇಲ ಅರಸರಿಗೆ ಸಂಬಂಧಿತವಾದ ಅನೇಕವು ರಾಜನನ್ನು ಅಭಿಷೇಕಿಸುವಾಗ

ಯೆಹೂದ್ಯರಿಂದ ಬಳಸಲ್ಪಡುತ್ತಿದ್ದವು. [32]ದಾವೀದನು ಇಸ್ರಾಯೇಲ ಅರಸನಾದಾಗ ಪಿಲಿಷ್ಟಿಯರು ರಾಜ್ಯದ ಮೇಲೆ ದಂಡೆತ್ತಿ ಬಂದರು. [33]ದೇವರ ಅಭಿಶಕ್ತನ ಮೇಲಿನ ಯಾವುದೇ ದಾಳಿಯು ದೇವರ ಮೇಲಿನ ದಾಳಿಯಂತಿದೆ. ಮತ್ತು ಯಾರು ದೇವರಿಗೆ ಸವಾಲೆಸೆಯುತ್ತಾರೋ ಅವರು ಸೋಲಿಗೆ ದೊಬ್ಬಲ್ಪಡತ್ತಾರೆ ಎಂದು ಕೀರ್ತನೆಗಾರನು ಹೇಳುತ್ತಾನೆ. ಅಪೊಸ್ತಲರು ಸಹ ತಮ್ಮ ಮೇಲಿನ ಯಾವುದೇ ದಾಳಿಯು ನಿಜವಾಗಿಯೂ ಯೇಸುವಿನ ಮೇಲಿನ ದಾಳಿಯಂತೆ ಎಂದು ತಿಳಿದಿದ್ದರು. [34]KJV ಯಲ್ಲಿ "ಮಗು" ಎಂದಿದೆ. ಆದರೆ ಮೂಲವಾಕ್ಯದಲ್ಲಿ, ಅದೇ ಗ್ರೀಕ್ ಪದವು ಬಳಕೆಯಾದದ್ದು ವಚನ 25ರಲ್ಲಿ ಕಂಡುಬಂದಿದ್ದು, KJV ಭಾಷಾಂತರದಲ್ಲಿ "ಸೇವಕ" ಎಂದಿದೆ. ಈ ಪುಸ್ತಕದ ಮೊದಲಿಗೆ ಸಿಕ್ಕುವ ಅಪೊಸ್ತಲರ ಕೃತ್ಯಗಳು 3:13ರಲ್ಲಿ ಉಪಯೋಗಿಸಲಾದ ಟಿಪ್ಪಣಿಯ ನೋಡಿ. [35]ಯೇಸುವು ಇಸ್ರಾಯೇಲ ಅರಸರ ಹಾಗೆ ಎಣ್ಣೆಯಿಂದ ಅಭಿಷೇಕಿಸಲ್ಪಡಲಿಲ್ಲ, ಬದಲಾಗಿ, ತನ್ನ ದೀಕ್ಷಾಸ್ನಾನದ ಸಮಯದಲ್ಲಿ ಪರಿಶುದ್ಧಾತ್ಮನಿಂದ ಅಭಿಷೇಕಿಸಲ್ಪಟ್ಟನು (ಮತ್ತಾಯ 3:16, 17; ಅಪೊಸ್ತಲರ ಕೃತ್ಯಗಳು 10:37, 38). [36]ಹಳೆಯ ಒಡಂಬಡಿಕೆಯಲ್ಲಿ "ಜನರು" ಎಂಬುವಥದ್ದನ್ನು ಇಸ್ರಾಯೇಲ್ಯರ ಸುತ್ತಲಿರುವ ಅನ್ಯಜನರನ್ನು ಸೂಚಿಸುವಂತದ್ದಾಗಿದೆ. ಅಪೊಸ್ತಲರು "ಜನರಿಗೆ" ಈ ಪದವನ್ನು ಇಸ್ರಾಯೇಲರಿಗೆ ಸೂಚಿಸುತ್ತಿದ್ದರು. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಇಸ್ರಾಯೇಲ ರಾಷ್ಟ್ರವು ಯೇಸುವನ್ನು ನಿರಾಕರಿಸಿದಾಗ, ದೇವರ ವಿಶೇಶ ಜನಾಂಗದ ಭಾಗ್ಯವನ್ನು ಕಳೆದುಕೊಂಡಿತು. ಇದು ಅನ್ಯಜನರ ರಾಷ್ಟ್ರವಾಯಿತು. [37]ಲೇವಿನ್ ಫಾಸ್ಟರ್, ಅಪೊಸ್ತಲರ ಕೃತ್ಯಗಳ ಮೇಲಿನ ಟಿಪ್ಪಣಿಗಳು. *The NIV Study Bible* (Grand Rapids, Mich.: Zondervan Publishing House, 1985), 1651. [38]ಈ ಪುಸ್ತಕದಲ್ಲಿ ಮೊದಲಿಗೆ ಅಪೊಸ್ತಲರ ಕೃತ್ಯಗಳು 2:23ರಲ್ಲಿನ "ಸುವಾರ್ತಾ ಬೋಧನೆ ಮತ್ತು ಇದರ ಸಂಪೂರ್ಣತೆ" ಎಂಬ ಪಾಠದಲ್ಲಿ ಕಂಡುಬರುವ ಟಿಪ್ಪಣಿಯನ್ನು ನೋಡಿರಿ. [39]ಒಂದು ವೇಳೆ ನೀವು ಈ ವಿಷಯವನ್ನು ತರಗತಿಗಳಲ್ಲಿ ಬಳಸುವುದಾದರೆ ನೀವು ತರಗತಿಯ ಸದಸ್ಯರಿಗೆ ಅವರು ಯಾವುದಕ್ಕೋಸ್ಕರ ಪ್ರಾರ್ಥಿಸಬಹುದು ಎಂದು ಕೇಳಬಹುದು. [40]ಅದಕ್ಕೆ ಸಮಾನವಾದ ಪ್ರಾರ್ಥನೆ ಟಿಪ್ಪಣಿಗಳು 2 ಅರಸುಗಳು 19:14-19; ಯೆಶಾಯ 37:17. "ಅದನ್ನು ಗಮನಿಸಿ ಇದರಂತೆ ನಡೆದುಕೊಳ್ಳಿರಿ" ಎಂದು ಸೂಚಿಸುತ್ತದೆ.

[41]ಅವರು, ಯೇಸು ಮತ್ತು ದಾವೀದರು "ಸೇವಕರು" ಎಂದು ಪರಿಗಣಿಸಿದರು (ವಚನ 25, 27, 30) ಅವರು ತಮ್ಮನ್ನು ತಾವೇ ಸ್ವತ "ಗುಲಾಮರು" ಎಂದು ಕರೆದುಕೊಳ್ಳುತ್ತಿದ್ದರು. [42]"ಮೇಲುಪ್ಪರಿಗೆಯ ಮನೆ" (1:13) ಇದು ಒಂದು "ಸ್ಥಳವಾಗಿದೆ" ಎಂದು ಕೆಲವರು ಊಹಿಸುವವ ರಾಗಿದ್ದಾರೆ, ಆದರೆ ಸಮಯವು ಸರಿದುದರಿಂದ ಅವರು ಇನ್ನೂ ಆ ಮನೆಯಲ್ಲಿಯೇ ಕೂಡಿರುತ್ತಿದ್ದರು ಎಂದು ನಂಬುವುದಕ್ಕೆ ಯಾವ ಆಧಾರವಿಲ್ಲ, ಅದೊಂದು ಮಹಡಿ ಮನೆಯಾಗಿರಬಹುದು ಅಥವಾ ದೇವಾಲಯದ ಸೊಲೊಮೋನನ ಮಂಟಪದ ಹತ್ತಿರ ಇರಬಹುದಾಗಿದೆ (5:12). ಅದು ಎಲ್ಲಿ ಇತ್ತು ಎಂಬುದು ನಮಗೆ ಸರಿಯಾಗಿ ತಿಳಿದಿಲ್ಲ. [43]ಮೊದಲೆ ಗಮನಿಸಿದಂತೆ ಅಪೊಸ್ತಲರ ಕೃತ್ಯಗಳು 2ರ ಪಂಚಾಶತ್ತಮವು ಒಂದು ಸಮಯದ ಘಟನೆಯಾಗಿದೆ. [44]"ಪರಿಶುದ್ಧಾತ್ಮನಿಂದ ತುಂಬಿಕೊಂಡಿರು" ಸಾಮಾನ್ಯವಾಗಿ ಇದರರ್ಥವು "ಆತ್ಮನ ನಿಯಂತ್ರಣದಲ್ಲಿರುವುದ" ಎಂದಾಗಿದೆ. ಪ್ರಸ್ತುತ ಗುಂಪು ಇತರ ಜೊತೆ ಅಪೊಸ್ತಲರೆಡೆಗೆ ಕೂಡಿಕೊಂಡಿತು; ಈ ಪದವು ಬಹುಶ ಎಫೆಸ 5:18ರಲ್ಲಿ "ಅದ್ಭತಗಳಿಲ್ಲದ" ಎಂಬರ್ಥವನ್ನು ಕೊಡುವ ರೀತಿಯಲ್ಲಿ ಬಳಕೆಯಾಗಿರಬಹುದು. ಆತನ ಚಿತ್ತಕ್ಕೆ ನಮ್ಮ ಜೀವಿತನ್ನು ಒಪ್ಪಿಸುವ ಮೂಲಕ ನಾವು ಆತ್ಮನ ನಿಯಂತಣದಲ್ಲಿರುವುದಕ್ಕೆ ಅವಕಾಶವನ್ನು ಕೊಡುವುದೆ ಆಗಿದೆ (ಹಳೆಯ ಒಡಂಬಡಿಕೆಯಲ್ಲಿ ಪ್ರಕಟಗೊಂಡಂತೆ). ನಾವು ಆತ್ಮನ ನಿಯಂತ್ರಣದಲ್ಲಿ ನಮ್ಮನ್ನು ಒಪ್ಪಿಸಿಕೊಡಾಗ, ಆತನು ನಮ್ಮ ಜೀವಿತವನ್ನು ತುಂಬುತ್ತಾನೆ ಮತ್ತು ಆತ್ಮನ ಫಲಗಳು ಉತ್ಪತ್ತಿಯಾಗುತ್ತವೆ (ಗಲ್ಯಾತ 5:22, 23). ಈ ಸಂದರ್ಭಗಳಲ್ಲಿ ಆತ್ಮನ ಪ್ರಸನ್ನತೆಯು ಪ್ರಕಟಗೊಂಡಿತು ಅವರು ವಾಕ್ಯವನ್ನು ಧೈರ್ಯದಿಂದ ಮಾತನಾಡಿದರು. ಇನ್ನೊಂದು ಮಾತಿನಲ್ಲಿ, ವಾಕ್ಯ ಭಾಗವು ಅಪೊಸ್ತಲರಿಗೆ ಮಾತ್ರ ಅಲ್ಲ ಎಲ್ಲಾ ಕ್ರೈಸ್ತರಿಗೆ ಸಾಮಾನ್ಯವಾಗಿ ಅನ್ವಯವಾಗುತ್ತದೆ. ಹೇಗೋ, ಪೇತ್ರನು ತನ್ನ ಜೊತೆಯ ಅಪೊಸ್ತಲರನ್ನು ಹುಡುಕಿದನು, ಅವರು ಪ್ರಾರ್ಥಿಸುವವರಾಗಿದ್ದರು, ಅವರು ಪರಿಶುದ್ಧಾತ್ಮನಿಂದ ತುಂಬಿದವರಾಗಿದ್ದರು ಮತ್ತು ಅವರು ದೇವವಾಕ್ಯವನ್ನು ಧೈರ್ಯದಿಂದ ಮಾತನಾಡುವವರೂ ಆಗಿದ್ದರು ನಾನು ನಂಬುತ್ತೇನೆ. ಈ ದಿಶೆಯಲ್ಲಿ ಲೂಕನು ಪೇತ್ರ ಮತ್ತು ಯೋಹಾನರು ಧೈರ್ಯದಿಂದ ಮಾತನಾಡುವವರೂ ಆಗಿದ್ದರು ನಾನು ನಂಬುತ್ತೇನೆ. ಈ ದಿಶೆಯಲ್ಲಿ ಲೂಕನು ಪೇತ್ರ ಮತ್ತು ಯೋಹಾನರು ಧೈರ್ಯದಿಂದ ದೇವವಾಕ್ಯದ ಬಗೆಗೆ ಮಾತನಾಡಿದ್ದನ್ನು ಮತ್ತು ಹಿಂಸೆಯನ್ನು ಎದುರಿಸಿದ್ದನ್ನೂ ದಾಖಲಿಸಿದ್ದಾನೆ. ಈಗ ಎಲ್ಲ ಅಪೊಸ್ತಲರೂ ಇದನ್ನೇ ಮಾಡಿದರು ಎಂದು ಆತನು ಬರೆಯುತ್ತಾನೆ. [45]ಅದು ಆತನು ಸಭೆಯ ಸದಸ್ಯರನ್ನು ಅಲುಗಾಡಿಸಲು ಶಕ್ತನಾಗಿದ್ದನು ಎಂದೇ ಆಗಿದೆ.